


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 08 Issue : 35 Sunday 12-10-2025 E-mail : maruti.b.hosamani76@gmail.com Page: 4 Price : Rs. 1/-


## ಶ್ರಮಿಕರ ಪಾಲಿಗೆ ಸಂಭ್ರಮದ ದಿನ, ಉಡುಪಿಯಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಭೇಟಿ – INTUC ಜಿಲ್ಲಾಧ್ಯಕ್ಷ ಕಿರಣ್ ಹೆಗ್ಡೆ ಶ್ರಮಕ್ಕೆ ಮೆಚ್ಚುಗೆ

**ಸಿಹಿ ಕಹಿ ಸುದ್ದಿ,**

**ಉಡುಪಿ :** ರಾಜ್ಯ ಕಾರ್ಮಿಕ ಸಚಿವ ಶ್ರೀ ಸಂತೋಷ್ ಲಾಡ್ ಅವರು ಉಡುಪಿ ಜಿಲ್ಲೆಗೆ ನೀಡಿದ ಮಹತ್ವದ ಭೇಟಿ ಮತ್ತು ಕಾಂಗ್ರೆಸ್ ಭವನದಲ್ಲಿ ನಡೆದ ಕಾರ್ಯಕ್ರಮವು ಜಿಲ್ಲೆಯ ಕಾರ್ಮಿಕ ಸಮುದಾಯದಲ್ಲಿ ಹೊಸ ಉತ್ಸಾಹ ಮತ್ತು ಸಂತಸದ ವಾತಾವರಣವನ್ನು ಸೃಷ್ಟಿಸಿದೆ. ಈ ಬೃಹತ್ ಕಾರ್ಯಕ್ರಮದ ಯಶಸ್ಸಿನಲ್ಲಿ ಭಾರತೀಯ ರಾಷ್ಟ್ರೀಯ ಕಾರ್ಮಿಕರ ಕಾಂಗ್ರೆಸ್ (ಖಓ–ಖಿಗಅ) ಜಿಲ್ಲಾಧ್ಯಕ್ಷರಾದ ಕಿರಣ್ ಹೆಗ್ಡೆ ಅವರ ಜನಪರ ಕಾಳಜಿ ಮತ್ತು ಸಂಘಟನಾ ಶಕ್ತಿ ಪ್ರಮುಖ ಪಾತ್ರ ವಹಿಸಿದೆ.

ಖಓಖಿಗಅ ಮನವಿ: ಕಾರ್ಮಿಕ ಸಮಸ್ಯೆಗಳ ಸಮಗ್ರ ಚಿತ್ರಣ

ಖಓಖಿಗಅ ಜಿಲ್ಲಾಧ್ಯಕ್ಷರಾದ ಕಿರಣ್ ಹೆಗ್ಡೆ ಅವರು ಸಚಿವ ಸಂತೋಷ್ ಲಾಡ್ ಅವರಿಗೆ ದಿನಾಂಕ 19/09/2023 ರಂದು ಸಲ್ಲಿಸಿದ ಮನವಿಯು ಕಾರ್ಮಿಕ ವರ್ಗದ ಪ್ರಮುಖ ಸಮಸ್ಯೆಗಳನ್ನು ಸ್ಪಷ್ಟವಾಗಿ ಎತ್ತಿ ತೋರಿಸಿದೆ. 'ಕಾರ್ಮಿಕ ಕಾರ್ಡ್ ಸರಿಯಾದ ಅಳತೆ ಇಲ್ಲದ ಬಗ್ಗೆ' ಎಂಬ ವಿಷಯದ ಅಡಿಯಲ್ಲಿ ಈ ಕೆಳಗಿನ ಪ್ರಮುಖ ಬೇಡಿಕೆಗಳನ್ನು ಸಚಿವರ ಮುಂದೆ ಇಡಲಾಗಿದೆ:

ಪ್ರಮುಖ ಬೇಡಿಕೆಗಳು ವಿವರಣೆ

ಇಖಐ ಮತ್ತು ಇಕಈ ವಿಸ್ತರಣೆ ಕೃಷಿ ಕಾರ್ಮಿಕರು ಮತ್ತು ಸಣ್ಣ ಕಾರ್ಖಾನೆಗಳ ಕಾರ್ಮಿಕರನ್ನು ಕೂಡಲೇ ಇಖಐ ಮತ್ತು ಇಕಈ ವ್ಯಾಪ್ತಿಗೆ ತರಬೇಕು. ಈ ಸೌಲಭ್ಯಗಳು ಅವರಿಗೆ ಸುಲಭವಾಗಿ ತಲುಪಲು ಅಭಿಯಾನ ನಡೆಸಲು ವಿನಂತಿ.

ಕೃಷಿ ಕಾರ್ಮಿಕರ ಸೌಲಭ್ಯ ಕೃಷಿ



ಕಾರ್ಮಿಕರನ್ನು ಇತರೆ ಕಾರ್ಮಿಕರಂತೆ ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ತಂದು, ಅವರಿಗೆ ಎಲ್ಲಾ ಸೌಲಭ್ಯಗಳು ಸಿಗುವಂತೆ ಕಾನೂನು ಬದಲಾವಣೆ ಮಾಡಬೇಕು.

ಪಿಎಫ್ (ಕಈ) ಮಾಹಿತಿ ಕೊರತೆ ವೇತನದಿಂದ ಕಡಿತವಾಗುವ ಇಕಈ ಹಣ ಸಕಾಲದಲ್ಲಿ ತಲುಪದಿರುವುದು ಮತ್ತು ಶೇ. 99ರಷ್ಟು ಕಾರ್ಮಿಕರಿಗೆ ತಮ್ಮ ಪಿಎಫ್ ಜಮೆ ಬಗ್ಗೆ ಮಾಹಿತಿಯೇ ಇಲ್ಲದಿರುವುದು. ಈ ಬಗ್ಗೆ ಜಾಗೃತಿ ಮೂಡಿಸಲು ಒತ್ತಾಯ.

ಕಾನೂನುನೆರವು ಇಕಈಮತ್ತುಗ್ರಾಚ್ಯುಯಿಟಿ (ಉಡಿಚಿಣಣುಣಥಿ) ಸಂಬಂಧಿತ ನ್ಯಾಯಾಲಯದ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸರ್ಕಾರ ಮತ್ತು ಇಲಾಖೆಯಿಂದ ನೆರವು ನೀಡಬೇಕು. ನ್ಯಾಯ ವಂಚಿತ ಕಾರ್ಮಿಕರಿಗೆ ನೆರವಾಗಲು ವಿನಂತಿ.

ಶ್ರಮದಾನ ಕಾರ್ಡ್ ಕೊರತೆ 60 ವರ್ಷ ದಾಟಿದ ಕಾರ್ಮಿಕರಿಗೆ ಶ್ರಮದಾನ (ಐಚಿ–ಥರಿಣಡಿ ಅಚಿಡಿಜ) ಸಿಗುತ್ತಿಲ್ಲ. ಅವರಿಗೆ ಹೊಸ ಕಾರ್ಡ್ ಮಾಡಿ, ವೇತನ ಹೆಚ್ಚಿಸುವ ಕಾನೂನು ಮಾಡುವಂತೆ ಕೋರಿಕೆ.

ಕಾರ್ಮಿಕರ ಸುರಕ್ಷತೆ ಯಾವುದೇ ಸುರಕ್ಷತಾ (ಖಚಿಜಿಜಣಥಿ) ಕ್ರಮಗಳಿಲ್ಲದೆ ನಡೆಯುವ ಕಟ್ಟಡ ನಿರ್ಮಾಣ ಕಾರ್ಯಗಳಿಗೆ ಕಡಿವಾಣ ಹಾಕಿ, ಕಾರ್ಮಿಕರ ಜೀವ ರಕ್ಷಣೆಗಾಗಿ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯ.

ಸಮಾಲೋಚನೆಯ ಪ್ರಮುಖ ಅಂಶಗಳು

ಕಿರಣ್ ಹೆಗ್ಡೆ ಅವರು ಸಚಿವರೊಂದಿಗೆ ನಡೆಸಿದ ದೀರ್ಘ ಸಮಾಲೋಚನೆಯಲ್ಲಿ, ಮೇಲಿನ ಬೇಡಿಕೆಗಳ ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಖಅ/ಖಖಿ) ನಿಧಿಯ ಸಮರ್ಪಕ ಬಳಕೆಯ ಬಗ್ಗೆ ಗಮನ ಸೆಳೆದಿದ್ದಾರೆ. ಜೊತೆಗೆ, ಉತ್ತಮ ದರ್ಜೆಯ ಇಎಸ್ಐ (ಇಖಐ) ಸೌಲಭ್ಯಗಳು, ಪಿಎಫ್ ಮತ್ತು ಗ್ರಾಚ್ಯುಟಿ ವಿಚಾರಗಳಲ್ಲಿ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆಯೂ ಪ್ರಬಲವಾಗಿ ಧ್ವನಿ ಎತ್ತಿದ್ದಾರೆ.

ಎಲ್ಲಾ ಕಾರ್ಮಿಕ ಸಂಘಟನೆಗಳ ಒಗ್ಗೂಡಿಸಿದ ಹೆಗ್ಡೆ: ಕಿರಣ್ ಹೆಗ್ಡೆ ಅವರು ಜಿಲ್ಲೆಯ ಎಲ್ಲಾ ಕಾರ್ಮಿಕ ಸಂಘಗಳ ನಾಯಕರನ್ನು ಒಗ್ಗೂಡಿಸಿ, ಅವರನ್ನು ಕಾರ್ಮಿಕ ಸಚಿವರಿಗೆ ಭೇಟಿ ಮಾಡಲು ಮುಕ್ತ ಅವಕಾಶ ಕಲ್ಪಿಸಿಕೊಟ್ಟರು. ಈ ಮೂಲಕ ಎಲ್ಲಾ ಕಾರ್ಮಿಕ ವರ್ಗಗಳ ಸಮಸ್ಯೆಗಳನ್ನು ಸಚಿವರ ಗಮನಕ್ಕೆ ತರಲು ಸಮಗ್ರ ವೇದಿಕೆ ಸಿದ್ಧಪಡಿಸಿದರು.

ಯಶಸ್ವಿ ಕಾರ್ಯಕ್ರಮ: ತೆರೆಮರೆಯ ಶ್ರಮಕ್ಕೆ ಸಾರ್ಥಕತೆ

ಸಚಿವರ ಈ ಕಾರ್ಯಕ್ರಮಕ್ಕೆ ನಾಲ್ಕು ಸಾವಿರಕ್ಕೂ ಹೆಚ್ಚಿನ ಶ್ರಮಿಕರು ಭಾಗವಹಿಸಿದ್ದು, ಇದು ಕಿರಣ್ ಹೆಗ್ಡೆ ಅವರ ಸಂಘಟನಾ ಶಕ್ತಿಗೆ ಸಾಕ್ಷಿಯಾಗಿದೆ. ಕಿರಣ್ ಹೆಗ್ಡೆ ಅವರು ಕಾರ್ಮಿಕ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಅತ್ಯಧಿಕ ಸಂಖ್ಯೆಯಲ್ಲಿ ಕಾರ್ಮಿಕರನ್ನು ಮನವಲಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದರು.

ಈ ಯಶಸ್ಸಿಗೆ ತೆರೆಮರೆಯಲ್ಲಿ ಇಂಟಕ್ ಜಿಲ್ಲಾಧ್ಯಕ್ಷರಾದ ಕಿರಣ್ ಹೆಗ್ಡೆ ಅವರ ಪಾತ್ರವೇ ಅತಿ ಮುಖ್ಯವಾಗಿದೆ.

ಕಾರ್ಯಕ್ರಮದಲ್ಲಿ ಸಚಿವ ಸಂತೋಷ್ ಲಾಡ್ ಅವರು ತಮ್ಮ ಎಂದಿನ ಶೈಲಿಯಲ್ಲಿ 'ಬೆಂಕಿ ಭಾಷಣ' ಮಾಡಿ, ಕಾರ್ಮಿಕ ಪರ ಸರ್ಕಾರದ ನಿಲುವುಗಳನ್ನು ಸ್ಪಷ್ಟಪಡಿಸಿ, ನೆರೆದಿದ್ದ ಶ್ರಮಿಕರಲ್ಲಿ ಹೊಸ ಉತ್ಸಾಹ ತುಂಬಿದರು. ಸಚಿವರ ಉಡುಪಿ ಭೇಟಿಯು ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವ ಭರವಸೆಯ ಹಬ್ಬವಾಗಿ ಮಾರ್ಪಟ್ಟಿದೆ.

**ವರದಿ:ಆರತಿ.ಗಿಳಿಯಾರು.ಉಡುಪಿ**

## ಪೌರ ಕಾರ್ಮಿಕರಿಗೆ ವಿಶ್ರಾಂತಿ ಗೃಹ ನಿರ್ಮಿಸಿ – ಉಪ ವಿಭಾಗ ಅಧಿಕಾರಿ ಎನ್.ವಿ ನಟೇಶ್.



**ಸಿಹಿ ಕಹಿ ಸುದ್ದಿ,**

**ತರೀಕೆರೆ:** ನಗರ ಸ್ವಚ್ಛತೆ ಮಾಡುವ ಪೌರ ಕಾರ್ಮಿಕರಿಗೆ ಪುರಸಭೆ ಪಟ್ಟಣ ಪಂಚಾಯಿತಿಯವರು ವಿಶ್ರಾಂತಿ ಗೃಹಗಳನ್ನು ನಿರ್ಮಿಸಬೇಕೆಂದು ಉಪ ವಿಭಾಗ ಅಧಿಕಾರಿ ಎನ್.ವಿ ನಟೇಶ್ ಹೇಳಿದರು. ಅವರು ಇಂದು ಪಟ್ಟಣದ ತಾಲೂಕು ಆಡಳಿತ ಸೌಧದಲ್ಲಿ ಏರ್ಪಡಿಸಿದ್ದ ಉಪ ವಿಭಾಗ ಮಟ್ಟದ ಸಫಾಯಿ ಕರ್ಮಚಾರಿ ಪುನರ್ ವಸತಿ ಕಾಯ್ದೆಯ ವೆಜಿಲೆನ್ಸಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಕುರಿತು ಸಮಿತಿ ಸದಸ್ಯರಾದ ತರೀಕೆರೆ ಎನ್. ವೆಂಕಟೇಶ್ ರವರು ಮಾತನಾಡುತ್ತಾ, ತರೀಕೆರೆ, ಬೀರೂರು, ಕಡೂರು ಪುರಸಭೆಗಳು ಮತ್ತು ಎನ್. ಆರ್ ಪುರ ಪಟ್ಟಣ ಪಂಚಾಯಿತಿ ಅಜ್ಜಂಪುರ ಪಟ್ಟಣ ಪಂಚಾಯಿತಿಯ ಮುಖ್ಯ ಅಧಿಕಾರಿಗಳು ಸ್ಥಳ ಗುರುತಿಸಿ ವಿಶ್ರಾಂತಿ ಗೃಹಗಳು ನಿರ್ಮಾಣ ಮಾಡಬೇಕೆಂದು ಒತ್ತಾಯಿಸಿದರು. ಪೌರ ಕಾರ್ಮಿಕರು ವಾಸವಾಗಿರುವ ಬಡಾವಣೆಯಲ್ಲಿ ಶುದ್ಧಗಂಗಾ ನೀರಿನ ಘಟಕ ಸ್ಥಾಪಿಸಬೇಕು ಮತ್ತು ತರೀಕೆರೆ ಅಂಬೇಡ್ಕರ್ ನಗರದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ನಿವೇಶನ ಮತ್ತು ಹಳೆಯ ಸಂತೆ ಮೈದಾನದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣಕ್ಕೆ ನಿವೇಶನವನ್ನು ಪುರ ಸಭೆಯಿಂದ ನೀಡಬೇಕೆಂದು ಒತ್ತಾಯಿಸಿದರು. ಇನ್ನೋರ್ವ ಸಮಿತಿ ಸದಸ್ಯರಾದ ಕಡೂರಿನ ಸಚಿನ್ ಮಾತನಾಡಿ, ಕಡೂರು ಪಟ್ಟಣದ ಅಂಬೇಡ್ಕರ್ ನಗರದಲ್ಲಿ ಶಿಥಿಲಗೊಂಡಿರುವ ಬಾಲವಾಡಿ ಕಟ್ಟಡವನ್ನು ಖುಲ್ಲಾ ಪಡಿಸಿ ಪೌರ ಕಾರ್ಮಿಕರಿಗೆ ವಿಶ್ರಾಂತಿ ಗೃಹ ನಿರ್ಮಿಸಲು ಕೋರಿದರು. ಸಮಿತಿ ಸದಸ್ಯರಾದ ಎಂ.ವಿ ಭವಾನಿ ಮಾತನಾಡಿ ಮನೆ ನಿವೇಶನ ರಹಿತರಿಗೆ ನಿವೇಶನ ನೀಡಿ. ಗೃಹ ಭಾಗ್ಯ ಯೋಜನೆಯಲ್ಲಿ ಮನೆಗಳನ್ನು ನಿರ್ಮಿಸಿ ಕೊಡಬೇಕು ಎಂದು ಹೇಳಿದರು. ಆಸ್ಪತ್ರೆ ಸ್ವಚ್ಛತೆ ಕಾರ್ಮಿಕರಿಗೆ ವಿಶ್ರಾಂತಿ ಕೊಠಡಿಗಳನ್ನು ಆಯಾ ಆಸ್ಪತ್ರೆಗಳ ವೈದ್ಯಾಧಿಕಾರಿಗಳು ವ್ಯವಸ್ಥೆ ಮಾಡಬೇಕೆಂದು ತಿಳಿಸಿದರು. ಎಲ್ಲಾ ಸ್ವಚ್ಛತಾ ಕಾರ್ಮಿಕರಿಗೆ ಸಫಾಯಿ ಕಾರ್ಮಿಕರ ಗುರುತಿನ ಚೀಟಿ ಕೊಡಬೇಕೆಂದು ಒತ್ತಾಯಿಸಿದರು. ಸಭೆಯಲ್ಲಿ ಪೊಲೀಸ್ ಉಪಾ ಅಧೀಕ್ಷಕರಾದ ಪರಶುರಾಮಪ್ಪ,ತರೀಕೆರೆ ತಹಸಿಲ್ದಾರ್ ವಿಶ್ವಜಿತ್ ಮೆಹತಾ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಎಸ್ ಮಂಜುನಾಥ್ ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಡಾ, ದೇವೇಂದ್ರಪ್ಪ,ನವೀನ್ ಕುಮಾರ್ ಎನ್ ಆರ್ ಪುರ, ಪುರಸಭಾ ಮುಖ್ಯ ಅಧಿಕಾರಿಗಳಾದ ವಿಜಯ್ ಕುಮಾರ್‌ತರೀಕೆರೆ,ಪ್ರಕಾಶ್‌ಬೀರೂರು,ಮಂಜುನಾಥ್ ಎನ್ ಆರ್ ಪುರ, ಕಡೂರು ಮಂಜಯ್ಯ, ಅಜ್ಜಂಪುರ ಮುಖ್ಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್. ವೆಂಕಟೇಶ್. ತರೀಕೆರೆ.ಚಿಕ್ಕಮಗಳೂರು**

## ಶಿಕ್ಷಣದಿಂದ ಮಾತ್ರ ಸುಧಾರಣೆ ಸಾಧ್ಯ: ಸತೀಶ ಜಾರಕಿಹೊಳಿ

**ರಬಕವಿ–ಬನಹಟ್ಟಿ :** ಶಿಕ್ಷಣದಿಂದ ಮಾತ್ರ ಸಮಾಜ ಸುಧಾರಣೆ ಸಾಧ್ಯವಾಗುತ್ತದೆ. ಶಿಕ್ಷಣದಿಂದ ಸಂಘಟನೆಯು ಬೆಳೆಯುತ್ತದೆ. ಶಿಕ್ಷಣ, ಸಂಘಟನೆ, ಹೋರಾಟ ಇವು ಸಮಾಜದ ಧ್ಯೇಯವಾಗಬೇಕು ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ರಾಂಪುರದ ದಾನೇಶ್ವರಿ ಕಲ್ಯಾಣ ಮಂಟಪದಲ್ಲಿ ಶಿವಶರಣ ನೂಲಿಚಂದಯ್ಯ ಜಯಂತಿ ಉತ್ಸವ ಸಮಿತಿಯ ಆಶ್ರಯದಲ್ಲಿ ಹಮ್ಮಿಕೊಂಡ ನೂಲಿಚಂದಯ್ಯನವರ 198 ನೇ ಜಯಂತಿಹಾಗೂಸಮುದಾಯದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನೂಲಿಚಂದಯ್ಯನವರು ಕಲ್ಯಾಣ ರಾಜ್ಯದಲ್ಲಿ ಕಾಯಕದೊಂದಿಗೆ ಜಂಗಮದಾಸೋಹಿಗಳಾಗಿದ್ದರು. ಅವರು ಸಮಾಜದಲ್ಲಿ ಸಮಾನತೆ, ಸ್ವಾಭಿಮಾನ ಮತ್ತು ಕಾಯಕ ನಿಷ್ಠೆಯನ್ನು ಸಾರುವ



ವಚನಗಳನ್ನು ರಚಿಸಿದ್ದಾರೆ. ಅವರ ಆದರ್ಶಗಳನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಶಾಸಕ ಸಿದ್ದು ಸವದಿ ಮಾತನಾಡಿ, ನೂಲಿ ಚಂದಯ್ಯ ಕಾಯಕದ ಮಹತ್ವ ಜಗತ್ತಿಗೆ ಸಾರಿದವರು. ಕಾಯಕದ ಮಹತ್ವ ಹೇಳಿದವರು. ಅಂತಹ ಸಮಾಜದಲ್ಲಿ ಹುಟ್ಟಿದ ಜನ ಅತ್ಯಂತ ಪ್ರಾಮಾಣಿಕರು ಎಂದರು.

ಮುಖಂಡ ಸಿದ್ದು ಕೊಣ್ಣೂರ, ಪರಿಶಿಷ್ಟ ಮತ್ತು ಅಲೆಮಾರಿ ಅಭಿವೃದ್ಧಿ ನಿಗಮ, ಸಮಾಜ ಕಲ್ಯಾಣ ಇಲಾಖೆ ಅಧ್ಯಕ್ಷೆ ಪಲ್ಲವಿ ಜಿ. ಕಾಂಗ್ರೆಸ್ ಧುರೀಣೆ ವೀಣಾ ಕಾಶಪ್ಪನವರ ಮಾತನಾಡಿದರು. ತಹಸೀಲ್ದಾರ ಗಿರೀಶ ಸ್ವಾದಿ, ಬೆಂಗಳೂರಿನ ಸಿ.ಪಿ.ಐ.ಹನಮಂತ ಬಜಂತ್ರಿ, ನಗರಸಭೆಯ ಅಧ್ಯಕ್ಷೆ ವಿದ್ಯಾ ದಬಾಡಿ, ಸದಸ್ಯರಾದ ಶೋಭಾ ಗಾಡಿವಡ್ಡರ, ಅರುಣ ಬುದ್ನಿ, ರಾಘವೇಂದ್ರ ನೀಲನ್ನವರ ಹಾಜರಿದ್ದರು.

ಸಮಾರಂಭದಲ್ಲಿ ರಬಕವಿ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು, ಮುಧೋಳ ಬೆಳಗಲಿಯ ಸಿದ್ಧಾರೂಢ ಆಶ್ರಮದ ಸಿದ್ಧರಾಮ ಶಿವಯೋಗಿಗಳು, ಕಣದಾಳ ಮಹಾಲಕ್ಷ್ಮಿ ಹಾಗೂ ಕೊರವಂಜಿ ದೇವಸ್ಥಾನ ರಾಮಣ್ಣ ಮಹಾರಾಜರು, ರನ್ನಬೆಳಗಲಿ ಪುಣ್ಯಕೋಟಿ ಸಿದ್ಧಾಶ್ರಮದ ಡಾ. ರಮೇಶಕುಮಾರ ಶಾಸ್ತ್ರಿಗಳು, ರಬಕವಿಯ ಗುರು ಸದಾಶಿವ ಶಾಖಾಮಠದ ನಿಹಾಲ ಅಪ್ಪಾಜಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸಮಾಜದ ಹಿರಿಯರಾದ ರಮೇಶ ಭಜಂತ್ರಿ, ಮಹಾದೇವ ಭಜಂತ್ರಿ, ಭೀಮಶಿ ಭಜಂತ್ರಿ, ಶಂಕರ ಭಜಂತ್ರಿ, ನಾಗಪ್ಪ ಭಜಂತ್ರಿ, ಸುರೇಶ ಭಜಂತ್ರಿ, ಯಶವಂತ ವಾಜಂತ್ರಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಜಿ. ಮಾದೇಶ ಪ್ರಾಸ್ತಾವಿಕವಾಗಿ ಮಾತನಾಡಿದರು. ಯಶವಂತ ವಾಜಂತ್ರಿ, ಡಾ. ಚಂದ್ರಕಾಂತ ಹೊಸೂರ ಸೊಗಸಾಗಿ ನಿರೂಪಿಸಿದರು. ನಾಗರಾಜ ಬಜಂತ್ರಿ ವಂದಿಸಿದರು.

## ಸಮಾಜದ ಅಭಿವೃದ್ಧಿಗೆ ಸಂಘಟನೆ ಅವಶ್ಯ: ಸಿದ್ದಣ್ಣ ಸಣಕಾಲ



**ರಬಕವಿ :** ಯಾವುದೇ ಸಮಾಜ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಎಲ್ಲರಲ್ಲೂ ಒಗ್ಗಟ್ಟಿನ ಬಲ ಬೇಕು. ಸಂಘಟಿತರಾಗಿ ನಿಸ್ವಾರ್ಥ ಭಾವನೆಯಿಂದ ಸಮುದಾಯದ ಕಟ್ಟಕಡೆಯ ವ್ಯಕ್ತಿಯ ಆರ್ಥಿಕ, ಸಾಮಾಜಿಕ ಪ್ರಗತಿಗೆ ಮುಂದಾದರೆ ಯಾವುದೇ ಕಠಿಣ ಕಾರ್ಯಗಳು ಕೂಡ ಸುಲಭ ಸಾಧ್ಯವಾಗುತ್ತವೆಂದು ರಬಕವಿಯ ಶಿವಸಿಂಪಿ ಸಮಾಜದ ಅಧ್ಯಕ್ಷ ಸಿದ್ದಣ್ಣ ಸಣಕಾಲ ಹೇಳಿದರು.

ರಬಕವಿಯ ಶಿವದಾಸಿಮಯ್ಯ ಸಮುದಾಯ ಭವನದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಸಮಾಜದ ಮಕ್ಕಳು ಶಿಕ್ಷಣ ಕ್ಷೇತ್ರದಲ್ಲಿ ಗುರುತರ ಸಾಧನೆ ಮೆರೆದು ಸಮಾಜ–ಕ್ಕೆ ಕೀರ್ತಿ ತರಬೇಕು. ಆರ್ಥಿಕ ಕಾರಣಕ್ಕೆ ಶಿಕ್ಷಣ ಸ್ಥಗಿತವಾಗುವಂತಿದ್ದರೆ ಅಂಥ ಮಕ್ಕಳ ಶಿಕ್ಷಣ ಪೂರ್ಣಗೊಳ್ಳಲು ನೆರವು ನೀಡಲು ಸಮಾಜದ ಧು–ರೀಣರು ಸಹಕರಿಸಬೇಕೆಂದರು. ಇದೇ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ, ಸಾಧಕರ ಸನ್ಮಾನ ಹಾಗೂ ನಿವೃತ್ತ ನೌಕರರ ಸನ್ಮಾನ, ಜೊತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ದೇವಕಿ ಅರಬಳ್ಳಿ ಪ್ರಾರ್ಥಿಸಿದರು. ಪ್ರಕಾಶ ಸಣಕಾಲ ಸ್ವಾಗತಿಸಿದರು. ಚಂದ್ರಶೇಖರ ಚೆನ್ನಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಚಿದಾನಂದ ಸೊಲ್ಲಾಪುರ ಲೆಕ್ಕಪತ್ರ ಮಂಡಿಸಿದರು.

ಮಲ್ಲೇಶಪ್ಪ ಸವದಿ, ಚಂದ್ರಶೇಖರ ತೆಲಸಂಗ, ಚಂದ್ರಶೇಖರ ಭೂಯಾರ, ದಾನಪ್ಪ ತುಂಗಳ, ಶ್ರೀಶೈಲ ಭೂಯಾರ, ಶಶಿಕಾಂತ ಜತ್ತಿ, ನಾಗಪ್ಪ ಅರಬಳ್ಳಿ, ಮಲ್ಲಿಕಾರ್ಜುನ ಆಸಂಗಿ, ಪ್ರವೀಣ ಪಾವಟೆ, ವೀರಣ್ಣ ಶಿವಣಗಿ, ಮಹೇಶ ಅರಬಳ್ಳಿ, ಬಾಬು ಗಂಗಾವತಿ, ವಿನಾಯಕ ಜತ್ತಿ, ಸಿದ್ಧರಾಮ ಸೋಲಾಪುರ ಮುಂತಾದವರು ಪಾಲ್ಗೊಂಡಿದ್ದರು.

## ದೇಶೀಯ ಕ್ರೀಡೆಗಳ ಉಳಿವಿಗೆ ಬೇಕು ರಾಜಾಶ್ರಯ: ಬಾಲಚಂದ್ರ ಉಮದಿ

**ರಬಕವಿ–ಬನಹಟ್ಟಿ :** ಭಾರತೀಯ ಪರಾಂಪರಾಗತ ಕ್ರೀಡೆಗಳಲ್ಲಿ ಬಹಳಷ್ಟು ಬೌದ್ಧಿಕ, ಶಾರೀ–ರಿಕ ಕೌಶಲ್ಯ ವೃದ್ಧಿಸುವ ಅಂಶಗಳಿದ್ದಾಗಲೂ ಅವನತಿ ಹೊಂದಿವೆ. ಕುಸ್ತಿ ವಿದ್ಯೆ ಶಾರೀ–ರಿಕ, ಬೌದ್ಧಿಕ ವಿಕಸನದ ಪ್ರಮುಖ ಕ್ರೀಡೆಯಾಗಿದ್ದು, ಪೈಲ್ವಾನರನ್ನು ರೂಪಿಸುವಲ್ಲಿ ಪೌಷ್ಠಿಕ ಆಹಾರ, ಸಾಧನೆಯ ಪಟ್ಟುಗಳ ನೀಡಿಕೆಯು ಬಹು ವೆಚ್ಚದ್ದಾಗಿದ್ದು, ಅದೂ ಕೂಡ ಈಗ ಗ್ರಾಮೀಣ ಭಾಗದಲ್ಲಿ ಮಾತ್ರ ಉಳಿದಿದೆ. ದೇಶೀಯ ಕ್ರೀಡೆಗಳ ಉಳಿಕೆಗೆ ಮತ್ತು ಬೆಳವಣಿಗೆಗೆ ರಾಜಾಶ್ರಯದ ಅಗತ್ಯವಿದ್ದು, ಸರ್ಕಾರ ನೆರೆಯ ಮಹಾರಾಷ್ಟ್ರ ರಾಜ್ಯ ಸರ್ಕಾರ ಪೈಲ್ವಾನರಿಗೆ ನೀಡುವ ಸೌಲಭ್ಯ ಮತ್ತು ಮಾಸಾಶನ ನೀಡುವ ಮೂಲಕ ಉಳಿಸಿ ಬೆಳೆಸಲು ವ್ಂಂದಾಗ ಬೇಕೆಂದು ಶ್ರೀಶಂಕರಲಿಂಗ ಟ್ರಸ್ಟ್ ಕಮೀಟಿ ಅಧ್ಯಕ್ಷ ಬಾಲಚಂದ್ರ ಉಮದಿ ಹೇಳಿದರು.

ರಬಕವಿಯ ಶ್ರೀಜೈ ಹನುಮಾನ



ಗರಡಿ ಮನೆ ಮತ್ತು ಕುಸ್ತಿ ಮೈದಾನದ ನವೀಕರಣಕ್ಕೆ ಸರ್ಕಾರ ನೀಡಿರುವ ರು.85ಲಕ್ಷ ಅನುದಾನದ ಕಾಮಗಾರಿಗಳಿಗೆ ಸಸಿಗೆ ನೀರುಣಿಸಿ ಚಾಲನೆ ನೀಡಿ ಮಾತನಾಡುತ್ತ, ನಮ್ಮ ದೇಶೀಯ ಆಟಗಳಿಗಿಂತ ನಾವು ಪರದೇಶಿ ಕ್ರೀಡೆಗಳಿಗೆ ನೀಡುತ್ತಿರುವ ಅಗ್ರಸ್ಥಾನದಿಂದ ಮತ್ತು ಕುಸ್ತಿ, ಕಬಡ್ಡಿ, ಖೋಖೋ ಮೊದಲಾದ ಗ್ರಾಮೀಣ ಕ್ರೀಡೆಗಳು ಯುವಕರಲ್ಲಿ ದೈಹಿಕ ಮತ್ತು ಮಾನಸಿಕ ಕ್ಷಮತೆ ಹೆಚ್ಚಿಸುವ ಮೂಲಕ ಸ್ವಸ್ಥ್ಯ ಪೀಳಿಗೆ ನಿರ್ಮಿಸಲು ಬುನಾದಿಯಾಗಿದ್ದರೂ ನಮ್ಮಲ್ಲಿನ ಅಸಡ್ಡೆಯಿಂದ ಪಾರಂಪ–ರಿಕ ಕ್ರೀಡೆಗಳು ವಿನಾಶದಂಚಿಗೆ ತಲುಪಿವೆ. ಬೇರೆ ದೇಶದ ಆಟಗಳೊಡನೆ ತುಲನೆ ಮಾಡಿದರೆ ನಮ್ಮ ಕ್ರೀಡೆಗಳು ಸಮಗ್ರ ವ್ಯಕ್ತಿತ್ವ ರೂಪಿಸಲು ರೂಪಿತವಾಗಿದ್ದು, ರಾಜ್ಯ ಸರ್ಕಾರ ಕುಸ್ತಿ ಪಟುಗಳಿಗೆ ನೌಕರಿ ನೀಡುವ ಮತ್ತು ಮಾಸಾಶನ ಕಲ್ಪಿಸುವ ಮೂಲಕ ಪಾರಂಪರಿಕ ಕ್ರೀಡೆ ಉಳಿಸಲು ಮುಂಧಗಬೇಕೆಂದರು.

ಶಾಸಕ ಸಿದ್ದು ಸವದಿ ಮೊದಲ ಕಂತಿನಲ್ಲಿ ರು.60 ಲಕ್ಷ ಮತ್ತು ಇದೀಗ ರು.25 ಲಕ್ಷ ಅನುದಾನ ಸರ್ಕಾರ ಗರಡಿಮನೆ ಮತ್ತು ಕುಸ್ತಿ ಮೈದಾನದ ನವೀಕರಣ–ಕ್ಕೆ ಬಿಡುಗಡೆಗೊಳಿಸಿದ್ದು, ಪೈಲ್ವಾನರು ಸದುಪಯೋಗಪಡಿಸಿಕೊಳ್ಳಬೇಕೆಂದರು. ಗುರುದೇವ ಶ್ರೀಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು ಬಲ ಮತ್ತು ಬುದ್ಧಿಶಕ್ತಿ ವೃದ್ಧಿಸುವ ಹೆಚ್ಚಿಸುವತ್ತ ನಮ್ಮ ಪೂರ್ವಜರು ರೂಢಿಸಿ, ರೂಪಿಸಿದ ಕ್ರೀಡೆಗಳನ್ನು ನಾವೆಲ್ಲರೂ ಬೆಂಬಲಿಸಿ ಉಳಿಸಿಕೊಳ್ಳಬೇಕಿದೆ ಎಂದು ಆಶೀರ್ವಚನ ನೀಡಿದರು.

ವೇದಿಕೆಯಲ್ಲಿ ನಗರಾಧ್ಯಕ್ಷೆ ವಿದ್ಯಾ ದಬಾಡಿ, ಉಪಾಧ್ಯಕ್ಷೆ ದೀಪಾ ಗಾಡಿವಡ್ಡರ, ನಗರ ಬಿಜೆಪಿ ಅಧ್ಯಕ್ಷ ಶ್ರೀಶೈಲ ಬೀಳಗಿ ಉಪಸ್ಥಿತರಿದ್ದರು. ಪ್ರಭು ಉಮದಿ ಸ್ವಾಗತಿಸಿದರು. ಡಾ.ಸಂಗಮೇಶ ಹತಪಾಕಿ ನಿರೂಪಿಸಿದರು. ಭೀಮಶಿ ಪಾಟೀಲ ವಂದಿಸಿದರು.

ಸಮಾರಂಭದಲ್ಲಿ ಮಾಜಿ ನಗರಾಧ್ಯಕ್ಷ ಸಂಜಯ ತೆಗ್ಗಿ, ಜಯಪ್ರಕಾಶ ಸೊಲ್ಲಾಪುರ, ಶಿವಾನಂದ ಹೊಸಮನಿ,

ಗೌರಿ ಮಿಳ್ಳಿ, ದುರ್ಗವ್ವ ಹರಿ–ಜನ, ವಸ್ತಾದ ವಲ್ಲಿ, ಹನುಮಂತ ಪೈಲ್ವಾನ್ ಸೇರಿದಂತೆ ಪ್ರಮುಖ–ರಿದ್ದರು.

## ಶಿಲ್ಪಾ ಗಾದ್ರೆ ಶ್ರೀಮತಿ ಬೆಂಗಳೂರು 2025 ಕಿರೀಟ ಪ್ರಧಾನ

**ಹೊಸಪೇಟ :** ಫಾರೆವರ್ ಸ್ಟಾರ್ ಇಂಡಿಯಾ ಆಯೋಜಿಸಿದ್ದ ಶ್ರೀಮತಿ ಇಂಡಿಯಾ ಸ್ಪರ್ಧೆಯಲ್ಲಿ ಬೆಂಗಳೂರು / ಶಿಲ್ಪಾ ಗಾದ್ರೆ ಶ್ರೀಮತಿ ಬೆಂಗಳೂರು 2025 ರ ಪ್ರತಿಷ್ಠಿತ ಪ್ರಶಸ್ತಿಯನ್ನು ಗೆದ್ದರು. ಫಾರೆವರ್ ಮಿಸೆಸ್ ಇಂಡಿಯಾ ಸ್ಪರ್ಧೆಯನ್ನು ಭಾರತದಾದ್ಯಂತ ವಿವಿಧ ನಗರಗಳಲ್ಲಿ ನಡೆಸಲಾಯಿತು, ಪ್ರತಿ ನಗರದ ವಿಜೇತರು ತಮ್ಮ ಪ್ರತಿಭೆಯ ಆಧಾರದ ಮೇಲೆ ತಮ್ಮ ವಿಜಯಗಳನ್ನು ಸಾಧಿಸಿದರು ಎಂಬುದು ಗಮನಿಸಬೇಕಾದ ಸಂಗತಿ. ಬಾಲ್ಯದಿಂದಲೂ ಮಾಡೆಲಿಂಗ್ನಲ್ಲಿ ಉತ್ಸಾಹ ಹೊಂದಿದ್ದ ಬೆಂಗಳೂರಿನ ನಿವಾಸಿ ಶಿಲ್ಪಾ, ಕುಟುಂಬದ ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಮದುವೆಯ ನಂತರ ಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದರು. ಫಾರೆವರ್ ಸ್ಟಾರ್ ಇಂಡಿಯಾದ ಸಂಸ್ಥಾಪಕ ಮತ್ತು ಸಿಇಓ ರಾಜೇಶ್ ಅಗರ್ವಾಲ್ ಮತ್ತು ನಿರ್ದೇಶಕಿ ಜಯಾ ಚೌಹಾಣ್ಗೆ ಧನ್ಯವಾದಗಳನ್ನು ಅರ್ಪಿಸಿದ ಶಿಲ್ಪಾ, ಫಾರೆವರ್ ಮಿಸೆಸ್ ಇಂಡಿಯಾದಂತಹ



ವೇದಿಕೆಗಳು ತಮ್ಮ ಕನಸನ್ನು ನನಸಾಗಿಸಲು ಅವಕಾಶ ಮಾಡಿಕೊಟ್ಟವು ಎಂದು ಹಂಚಿಕೊಂಡರು.

## ರಾಷ್ಟ್ರೀಯ ವಿಣಕರ ಸೇವಾ ಸಂಘದ ಲೆಟರ್ ಹೆಡ್ ದುರುಪಯೋಗ



**ರಬಕವಿ-ಬನಹಟ್ಟಿ:** ಕೆಲವು ಪಟ್ಟಭದ್ರ ಹಿತಾಸಕ್ತಿಗಳು ರಾಷ್ಟ್ರೀಯ ವಿಣಕರ ಸೇವಾ ಸಂಘದ ಲೆಟರ್ ಹೆಡ್ ಬಳಸಿ ಅದರ ದುರುಪಯೋಗ ಮಾಡಿಕೊಳ್ಳುತ್ತಿದ್ದು, ಕೂಡಲೇ ಈ ಕುರಿತು ಪರಿಶೀಲನೆ ಮಾಡಿ ಅಂಥವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದ ರಾಜ್ಯಾಧ್ಯಕ್ಷ ಶಿವಲಿಂಗ ಟಿರಕಿ ಆಗ್ರಹಿಸಿದರು.

ಅವರು ಸೋಮವಾರ ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ತೇರದಾಳ ತಹಶೀಲ್ದಾರ್ ವಿಜಯಕುಮಾರ ಕಡಕೋಳ ಅವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದರು.

ಮಾಣಕಾಪುರ ಪಾವರಲೂಮ್ ಅಸೋಶಿಯೇಶನ್ ಇದರ ನೊಂದಣಿಯನ್ನು ಬಳಸಿಕೊಂಡು ಅನಧಿಕೃತ ಸಹಿಯನ್ನು ಮಾಡಿ ಬನಹಟ್ಟಿಯ ನೇಕಾರರಾದ ಶಿವಾನಂದ ತೆಗ್ಗಿ, ಮಹಾದೇವ ನುಚ್ಚಿ, ಆನಂದ ಜಗದಾಳ, ವಿಶಾಲ ಬೀಳಗಿ, ಲಕ್ಕಪ್ಪ ಗಸ್ತಿ, ಶ್ರೀಧರ ಧಬಾಡಿ ಇವರು ಅನೇಕ ಇಲಾಖೆಗಳಿಗೆ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಆರೋಪಗಳನ್ನುಮಾಡುತ್ತಿದ್ದಾರೆ. ಇದೇಪತ್ರದಮೂಲಕಸರ್ಕಾರಕ್ಕೂ ತಪ್ಪು ಮಾಹಿತಿಯನ್ನು ಕೂಡಾ ನೀಡುತ್ತಿದ್ದಾರೆ. ಅವರು ಬಳಸುತ್ತಿರುವ ಪತ್ರವು ಅನಧಿಕೃತವಾಗಿದ್ದು, ಅಂಥ ಪತ್ರಗಳಿಗೆ ಯಾವುದೆ ಮಾನ್ಯತೆ ನೀಡಬಾರದು.

ಮುಂದಿನದಿನಗಳಲ್ಲಿಈಪತ್ರವನ್ನು ಬಳಸಿಕೊಂಡು ಯಾವುದೆ ಹೋರಾಟ ಮಾಡಿದರೂ ಅದಕ್ಕೆ ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘವು ಜವಾಬ್ದಾರಿಯಾಗಿರುವುದಿಲ್ಲ ಎಂದು ಶಿವಲಿಂಗ ಟಿರಕಿ ತಿಳಿಸಿದರು.

ಈ ಸಂದರ್ಭದಲ್ಲಿ ರಾಜೇಂದ್ರ ಮಿರ್ಜಿ, ಸಂಗಪ್ಪ ಉದಗಟ್ಟಿ, ಗಂಗಪ್ಪ ಒಂಟಗೂಡಿ, ರಾಜು ನಡುವಿನಮನಿ, ರಮೇಶ ಬಸಪ್ಪಗೋಳ, ಮಲ್ಲಯ್ಯ ಮಠಪತಿ, ಲಕ್ಕಪ್ಪ ಪವಾರ ಮತ್ತು ಈರಪ್ಪ ಅಥಣಿ ಭಾಗವಹಿಸಿದ್ದರು.

## ಹಿರಿಯ ನಾಗರಿಕರ ಹಕ್ಕುಗಳ ಬಗ್ಗೆ ಜಾಗೃತಿ ಅಗತ್ಯ: ನ್ಯಾ. ಸಣಮನಿ



**ರಬಕವಿ-ಬನಹಟ್ಟಿ :** ಹಿರಿಯ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಭದ್ರತೆ ಹಾಗೂ ಅವರು ಜೀವಿಸಲು ಉತ್ತಮ ವಾತಾವರಣವನ್ನು ಕಲ್ಪಿಸುವ ನಿಟ್ಟಿನಲ್ಲಿ ಹಿರಿಯ ನಾಗರಿಕರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗುತ್ತಿದೆ.

ಹಿರಿಯ ನಾಗರಿಕರಿಗೆ ಅವರ ಹಕ್ಕುಗಳ ಕುರಿತು ಜಾಗೃತಿ ಅಗತ್ಯವಾಗಿದೆ ಎಂದು ಬನಹಟ್ಟಿಯ ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶ ಆಶಪ್ಪ ಸಣಮನಿ ತಿಳಿಸಿದರು.

ಅವರು ಬನಹಟ್ಟಿಯ ಆಶೋಕ ಕಾಲೋನಿಯ ಗಣಪತಿ ದೇವಸ್ಥಾನದ ಆವರಣದಲ್ಲಿ ನಡೆದ ಹಿರಿಯ ನಾಗರಿಕರ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಿರಿಯ ನಾಗರಿಕರ ಜೀವನ ಯುವಕರಿಗೆ ಮಾದರಿಯಾಗಬೇಕು. ಅದೇರೀತಿಯಾಗಿ ಹಿರಿಯ ನಾಗರಿಕರು ಯುವಕರಿಗೆ ಮಾರ್ಗದರ್ಶನ ಮಾಡಬೇಕು. ಪ್ರತಿಯೊಬ್ಬರು ಹಿರಿಯ ನಾಗರಿಕರನ್ನು ಗೌರವಿಸಬೇಕು ಎಂದು ನ್ಯಾಯಾಧೀಶ ಸಣಮನಿ ತಿಳಿಸಿದರು.

ಹಿರಿಯ ವಕೀಲ ಎಂ. ಜಿ. ಕೆರೂರ ಮಾತನಾಡಿ, ಹಿರಿಯ ನಾಗರಿಕರು ತಾವುಮಾಡುವಉದ್ಯೋಗದಿಂದ ನಿವೃತ್ತಿಂಯಾಗಿರಬಹುದು. ಆದರೆ ಜೀವನದಿಂದ ನಿವೃತ್ತರಾಗಿರುವುದಿಲ್ಲ.

ಹಿರಿಯ ನಾಗರಿಕರ ಆಸ್ತಿಗಳನ್ನು ರಕ್ಷಿಸಲು ಗಮನ ನೀಡಬೇಕು. ಹಿರಿಯ ನಾಗರಿಕರು ತಮ್ಮ ಮಕ್ಕಳು ಮತ್ತು ವಾರಸುದಾರರಿಂದ ನಿರ್ವಹಣೆಯನ್ನು ಪ ಡ ದ ಂ ಕ ೊ ಳ ್ ಲ ಂ ಅರ್ಹರಾಗಿರುತ್ತಾರೆ ಎಂದರು.

ಕಾಲೋನಿಯ ಮುಖಂಡ ಕಲ್ಲಪ್ಪ ಗೋಕಾವಿ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಸರ್ಕಾರಿ ಅಭಿಯೋಜಕ ರಾಹುಲ ಶಹಾ, ವಕೀಲರಸಂಘದಅಧ್ಯಕ್ಷಶ್ರೀಕಾಂತ ಕುಲಕರ್ಣಿ, ಕಾರ್ಯದರ್ಶಿ ರವೀಂದ್ರ ಸಂಪಗಾಂವಿ, ಆರ್. ಎನ್. ಕಾಮಗೊಂಡ, ಕೆ. ಎಸ್. ನ್ಯಾಮಗೌಡ, ಅಶ್ವಿನಿ ಹಾರೂಗೇರಿ, ಎ.ಎಸ್.ಐ. ಬಾಬಾನಗರ, ಶಂಕರ ಟಿರಕಿ, ರುಕ್ಷ್ಮಿಣಿ ಮುಂಡಾಸ, ಸುಮಿತ್ರಾ ಬೋರಗಿ ಉಪಸ್ಥಿತರಿದ್ದರು.

## ಹದಿನಾರು ವರ್ಷಗಳ ನಂತರ ಒಂದಾದ ಸ್ನೇಹಿತರು: ಭಾರತೀಯ ಗುರು ಶಿಷ್ಯ ಪರಂಪರೆ ಶ್ರೇಷ್ಠವಾದುದು



**ರಬಕವಿ-ಬನಹಟ್ಟಿ :** ಭಾರತೀಯ ಗುರು ಮತ್ತು ಶಿಷ್ಯ ಪರಂಪರೆ ಶ್ರೇಷ್ಠವಾದುದು. ಜಗತ್ತಿನ ಪ್ರತಿಯೊಬ್ಬ ಶ್ರೇಷ್ಠ ವ್ಯಕ್ತಿಗಳಿಗೆ ಗುರುವೇ ಮೂಲ ಶಕ್ತಿಯಾಗಿರುತ್ತಾರೆ. ಗುರು ಶಕ್ತಿಯ ಮೂಲವಾಗಿರುತ್ತಾರೆ. ಆದರೆ ಕೆಲವರಿಗೆ ಅರಿವೇ ಗುರು ಎಂದು ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ತಿಳಿಸಿದರು.

ಅವರು ಶನಿವಾರ ಸ್ಥಳೀಯ ಎಸ್ ಟಿ ಸಿ ಕಾಲೇಜಿನಲ್ಲಿ 2006-09 ನೇ ಸಾಲಿನಲ್ಲಿ ವಾಣಿಜ್ಯ ವಿಭಾಗದಲ್ಲಿ ಅಭ್ಯಶಿಸಿದ್ದ ಪದವಿ ವಿದ್ಯಾರ್ಥಿಗಳು ಹಮ್ಮಿಕೊಂಡ ಗುರುವಂದನಾ ಮತ್ತು ಸ್ನೇಹ ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಿವೃತ್ತ ಪ್ರಾಚಾರ್ಯ ಎಸ್. ಎಸ್. ಹೂಲಿ ಮಾತನಾಡಿ, ವಿದ್ಯಾರ್ಥಿ ಸಮುದಾಯಕ್ಕೆ ಗುರು ಯಾವಾಗಲೂ ಒಳ್ಳೆಯದನ್ನೆ ಬಯಸುತ್ತಾನೆ. ಭವಿಷ್ಯದಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು ಎಂದರು.

ವಿದ್ಯಾರ್ಥಿಗಳಾದ ರಾಜು ಗೊಂದಕರ, ಶಿವಾನಂದ ಹಳ್ಯಾಳ, ಸೀಮಾ ಬರಗಡಗಿ, ಸಂಗೀತಾ ಇಂಗಳೆ, ವಿನಾಯಕ ಜತ್ತಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಎಸ್. ಬಿ. ಮಟೋಳ್ಳಿ, ಬಿ. ಆರ್. ಬಿರಾದಾರ, ಎಂ. ಪಿ. ತಾನಪ್ಪಗೋಳ, ವೈ.ಡಿ.ಬಾಗಿ, ಗೋಕುಲ ಕಾಬ್ರಾ, ರಮೇಶ ಮಾಗುರಿ, ಗೀತಾ ಸಜ್ಜನ, ವಿಶ್ವಜ ಕಾಡದೇವರ ಅವರನ್ನು ಸನ್ಮಾನಿಸಲಾಯಿತು.

ಪ್ರಾಚಾರ್ಯ ಜಿ. ಆರ್. ಜುನ್ನಾಯ್ಕರ್ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ದಯಾನಂದ ಸವದತ್ತಿ, ನಯೀಮ ತಾಂಬೋಳಿ, ರಾಕು ಖಿಡಕಬಾವಿ, ಪ್ರವೀಣ ಅಬಕಾರ, ಭಕ್ತಿ ಸೋಮಯ್ಯ, ಆನಂದ ಪಟ್ಟಣ, ವಿಶ್ವನಾಥ ಬಂದಿ, ಬಸವರಾಜ ಹೊಸಮನಿ, ಶೀಲಾ ಸಾಬೋಜಿ, ಪ್ರಮಿಳಾ ಮಗದುಮ್, ಸುಪ್ರಿಯಾ ಸವದತ್ತಿ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

## ಅ.13 ರಂದು ಸಿಎಂಗೆ ಕಪ್ಪು ಬಾವುಟ ಪ್ರದರ್ಶನ

**ಮಹಾಲಿಂಗಪುರ :** ಪಟ್ಟಣವನ್ನು ತಾಲ್ಲೂಕುರಚನೆಮಾಡಬೇಕೆಂದು ಒತ್ತಾಯಿಸಿ ಕಳೆದ 1275 ದಿನಗಳಿಂದ ಹೋರಾಟ ನಡೆಯುತ್ತಿದ್ದರೂ ಸಹ ಸರಕಾರದ ದಿವ್ಯ ನಿರ್ಲಕ್ಷ್ಯವನ್ನು ಖಂಡಿಸಲು ಅಕ್ಟೋಬರ13ರಂದುಬಂಡಿಗಣಿಗೆ ಆಗಮಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮುತ್ತಿಗೆ ಹಾಕಿ, ಅವರ ವಿರುದ್ಧ ಕಪ್ಪು ಬಾವುಟ ಪ್ರದರ್ಶನ ಮಾಡಲು ತಾಲ್ಲೂಕು ಹೋರಾಟಗಾರರು ತೀರ್ಮಾನಿಸಿದ್ದಾರೆ.

ಪಟ್ಟಣದ ನೀಲಕಂಠೇಶ್ವರ ಸಾಂಸ್ಕೃತಿಕ ಭವನದಲ್ಲಿ ಜರುಗಿದ ತಾಲ್ಲೂಕು ಹೋರಾಟಗಾರರ ಸಭೆಯಲ್ಲಿ ಸಮಿತಿಯ ಅಧ್ಯಕ್ಷ ಸಂಗಪ್ಪ ಹಲ್ಲಿ ಮಾತನಾಡಿ, ಕಳೆದ ಮೂರುವರೆ ವರ್ಷಗಳಿಂದ ನಮ್ಮದು ತಾಲ್ಲೂಕು ಹೋರಾಟ ನಡೆಯುತ್ತಿದೆ. ಮುಖ್ಯವಾಗಿ ನಾವು ಮೊದಲಿನಿಂದಲೂ ನಮ್ಮ ಮಹಾಲಿಂಗಪುರ ಇರುವದು ಮುಧೋಳ ಹೋಬಳಿಯಲ್ಲಿ. ನಾವು ಈಗ ಕೇಳುತ್ತಿರುವದು ಜಮಖಂಡಿ ತಾಲ್ಲೂಕಿನ ಹಳ್ಳಿಗಳನ್ನು ಅಲ್ಲಾ. ಮುಧೋಳ ತಾಲ್ಲೂಕಿನಲ್ಲಿ 84 ಹಳ್ಳಿಗಳಿವೆ. ಅದರಲ್ಲಿ ಮಹಾಲಿಂಗಪುರ ಪಟ್ಟಣ ಸೇರಿದಂತೆ ಸುಮಾರು 14-15 ಹಳ್ಳಿಗಳನ್ನು ಒಡೆದು ನೂತನ ಮಹಾಲಿಂಗಪುರ ತಾಲ್ಲೂಕು ರಚನೆ ಆಗಬೇಕು ಎಂಬುವದು ನಮ್ಮ ಬೇಡಿಕೆಯಾಗಿದೆ. ಸಿ.ಎಂ. ಮತ್ತು ಕಂದಾಯ ಸಚಿವರು ನಮ್ಮ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿ ಶೀಘ್ರ ತಾಲ್ಲೂಕು ರಚಿಸಬೇಕು ಎಂದರು.

ರೈತ ಸಂಘದ ಮುಖಂಡರಾದ ಗಂಗಾಧರ ಮೇಟಿ, ಆಮ್ ಆದ್ಮಿ ಪಕ್ಷದ ಮುಖಂಡ ಅರ್ಜುನ ಹಲಗಿಗೌಡರ, ಮುಖಂಡರಾದ ಮಹಾಂತೇಶ ಹಿಟ್ಟಿನಮಠ, ಶಿವಲಿಂಗಟರ್ಕಿ, ಪರಪ್ಪಬ್ಯಾಕೂಡ ಮಾತನಾಡಿ ನಮ್ಮ ಹೋರಾಟ ನಿರಂತರವಾಗಿರಲಿ. ಗೆಲುವಿಗಾಗಿ ಕಾಯುವ ತಾಳ್ಮೆಯು ಇರಬೇಕು. ಸರ್ಕಾರ ಮತ್ತು ಜನಪ್ರತಿನಿಧಿಗಳು ನಮ್ಮ ಹೋರಾಟ ಮತ್ತು ಬೇಡಿಕೆಯನ್ನು ಸರ್ಕಾರಿ ದಾಖಲೆ ಸಮೇತ ಪರಿಶೀಲಿಸಿ ಶೀಘ್ರ ಮಹಾಲಿಂಗಪುರ ತಾಲ್ಲೂಕು ಘೋಷಿಸಬೇಕೆಂದು ಒತ್ತಾಯಿಸಿದರು.

ಸಭೆಯಲ್ಲಿ ಮಹಾದೇವ ಮೇಟಿ, ಮಹಾಲಿಂಗಪ್ಪ ಅವರಾದಿ, ದುಂಡಪ್ಪ ಇಟ್ನಾಳ, ನಿಂಗಪ್ಪ ಬಾಳಿಕಾಯಿ, ಮಾರುತಿ ಖರೋಶಿ, ರಾಜೇಂದ್ರ ಮಿರ್ಜಿ, ದುಂಡಪ್ಪ ಚನ್ನಾಳ, ಭೀಮಸಿ ನಾಯಕ, ಸದಾಶಿವ ಬರಗಿ, ಹಣಮಂತ ವಗ್ಗರ, ಸಿದ್ದು ಶಿರೋಳ, ರಫೀಕ ಮಾಲದಾರ, ಚನ್ನು ದೇಸಾಯಿ, ಬಸಪ್ಪ ಮೇತ್ರಿ, ಅರುಣ ಬಡಿಗೇರ, ಭೀಮಪ್ಪ ನಾಯಕ, ಹಣಮಂತ ದೇಸಾಯಿ ಸೇರಿದಂತೆ ಇನ್ನೂ ಹಲವರು ಸಭೆಯಲ್ಲಿ ಭಾಗವಹಿಸಿದ್ದರು.

# ಜಗದ ಕವಿ ವಾಲ್ಮೀಕಿಗೆ ನುಡಿ ನಮನ

ಜಗತ್ತಿನ ಅತ್ಯಂತ ಪುರಾತನ ಮತ್ತು ಶ್ರೇಷ್ಠ ಮಹಾಕಾವ್ಯಗಳಲ್ಲಿ ನಮ್ಮ ರಾಮಾಯಣ ಮತ್ತು ಮಹಾಭಾರತ ಅಗ್ರಸ್ಥಾನದಲ್ಲಿವೆ. ಈ ರಾಮಾಯಣ ಮಹಾಕಾವ್ಯದ ಕರ್ತೃವೇ ನಮ್ಮ ಆದಿಕವಿ ಮಹರ್ಷಿ ವಾಲ್ಮೀಕಿ. ಇವರು ಕ್ರಿ.ಪೂ.500 ರಲ್ಲಿ ಜನಿಸಿದ್ದರು. ಇವರು ದೀಪಾಂಶು ಕುಲಶ್ರೇಷ್ಠ ಗೌರವಕ್ಕೆ ಪಾತ್ರರಾಗಿದ್ದಾರೆ. ರಾಮಾಯಣ ಮಹಾಕಾವ್ಯ, ಯೋಗ ವಾಸಿಷ್ಠ, ವಾಲ್ಮೀಕಿ ಸಂಹಿತೆ ಕೃತಿಗಳನ್ನು ಇವರು ರಚಿಸಿದ್ದಾರೆ

**ಕೂಜಂತಂ ರಾಮ ರಾಮೇತಿ।**
**ಮಧುರ ಮಧುರಾಕ್ಷರಮ್ ॥**
**ಆರುಹ್ಯ ಕವಿತಾಶಾಖಾಂ।**
**ವಂದೇ ವಾಲ್ಮೀಕಿ ಕೋಕಿಲಮ್ ॥**

ರೂಪಕಾಲಂಕಾರದಿಂದ ಕೂಡಿದ ಈ ಶ್ಲೋಕವು ವಾಲ್ಮೀಕಿ ಋಷಿಯನ್ನು ಸ್ಮರಿಸುತ್ತ ಬುಧಕೌಶಿಕ ಮುನಿ ವಿರಚಿತ ಶ್ರೀರಾಮರಕ್ಷಾ ಸ್ತೋತ್ರದಲ್ಲಿದೆ. ಇದರರ್ಥ 'ಕಾವ್ಯವೆಂಬ ಮರದ ಮೇಲೆ ಕುಳಿತು, 'ರಾಮ ರಾಮಾ' ಎಂದು ಹಾಡುತ್ತಿರುವ ವಾಲ್ಮೀಕಿ ಎಂಬ ಕೋಗಿಲೆಗೆ ನಮಸ್ಕಾರಗಳು ಎಂದಿದ್ದಾರೆ. ಇಂತಹ ಅಪ್ರತಿಮ ಆದಿಕವಿಯ ಹುಟ್ಟು ಮತ್ತು ಯೌವ್ವನದ ಬಗ್ಗೆ ಅನೇಕ ಕಥೆಗಳಿದ್ದರೂ, ಅವರ ಸಾಧನೆ ಮಾತ್ರ ಅಮೂಲ್ಯವಾದದ್ದು. ಇಂದಿಗೂ ಅವರು ರಚಿಸಿರುವ ರಾಮಾಯಣವು ಸಂಸ್ಕೃತ ಸಾಹಿತ್ಯದ ಮೊದಲ ಮಹಾಕಾವ್ಯವಾಗಿದ್ದು, ಇಂದಿಗೂ ಕೂಡ ಪ್ರಚಲಿತದಲ್ಲಿದೆ. ಅನೇಕ ರಾಮಾಯಣಗಳ ಆವೃತ್ತಿಗಳಿಗೆ ಇದು ಮೂಲಾಧಾರವಾಗಿದೆ. ಇಂತಹ ಮಹಾನ್ ಋಷಿಯ ಸ್ಮರಣಾರ್ಥವಾಗಿ ಪ್ರತಿವರ್ಷ ಆಶ್ವಯುಜ ಶುದ್ಧ ಹುಣ್ಣಿಮೆಯ ದಿನವನ್ನು ಮಹರ್ಷಿ ವಾಲ್ಮೀಕಿ ಜಯಂತಿ ಅಥವಾ ಪರ್ಗತ್ ದಿವಸ್ ಎಂದು ಆಚರಿಸಲಾಗುತ್ತದೆ. ಇದು ಹಿಂದೂ ಧರ್ಮದ ವಾಲ್ಮೀಕಿ ಧಾರ್ಮಿಕ ಪಂಥದ ಅನುಯಾಯಿಗಳ ಪ್ರಮುಖ ಹಬ್ಬವಾಗಿದೆ. ಸಾಮಾನ್ಯವಾಗಿ ಇದು ಸೆಪ್ಟೆಂಬರ್ - ಅಕ್ಟೋಬರ್ ತಿಂಗಳಿನಲ್ಲಿ ಬರುತ್ತದೆ.

ಮಹರ್ಷಿ ವಾಲ್ಮೀಕಿಯ ಜಯಂತಿಯಂದು ಅವರ ಕುರಿತು ಇತಿಹಾಸದ ಪುಟಗಳಲ್ಲಿರುವ ವಿಷಯಗಳನ್ನು ತಿಳಿದುಕೊಳ್ಳೋಣ ಬನ್ನಿ. ಮಹರ್ಷಿ ವಾಲ್ಮೀಕಿಯ ಜೀವನದ ಕುರಿತಾಗಿ ಅನೇಕ ದಂತಕಥೆಗಳಿವೆ. ಪ್ರಚೇತ ಶರ್ಮ ಸುಮಾಲಿ ಎಂಬ ಭೃಗು ಗೋತ್ರದ ಋಷಿಯ ಮಗನಾದ ಅಗ್ನಿ ಶರ್ಮ ಎಂಬುವ ಬಾಲಕನು ಒಮ್ಮೆ ಕಾಡಿನಲ್ಲಿ ಅಲೆಯುವಾಗ ದಾರಿ ತಪ್ಪಿಸಿಕೊಳ್ಳುತ್ತಾನೆ. ಆ ಬಾಲಕನನ್ನು ಓರ್ವ ಬೇಡ ಕಂಡು ತನ್ನ ಮನೆಗೆ ಕರೆದೊಯ್ದು, ತನ್ನ ಮಗನಂತೆ ಸಾಕುತ್ತಾನೆ. ಆತನಿಗೆ ರತ್ನಾಕರನೆಂದು ಹೆಸರಿಡುತ್ತಾನೆ. ಆ ಬಾಲಕ ಬೇಡನಂತೆಯೇ ಬೆಳೆದು ದೊಡ್ಡವನಾಗುತ್ತಾನೆ. ನಂತರ ಅವನಿಗೆ ಬೇಡ ಕನ್ಯೆಯೊಂದಿಗೆ ಮದುವೆಯಾಗಿ ಹಲವು ಮಕ್ಕಳೂ ಹುಟ್ಟುತ್ತವೆ. ದೊಡ್ಡ ಸಂಸಾರದ ಬೇಡಿಕೆಗಳನ್ನು ಪೂರೈಸಲು ಆತ ಅನಿವಾರ್ಯವಾಗಿ ಲೂಟಿಕೋರನಾಗುತ್ತಾನೆ. ಒಮ್ಮೆ ಅವನಿದ್ದ ದಾರಿಯಲ್ಲಿ ಬಂದ ನಾರದರನ್ನು ಸಹ ಲೂಟಿ ಮಾಡಲು ಯತ್ನಿಸಿದಾಗ, ನಾರದರು ಆತನ ಮನಸ್ಸನ್ನು ಪರಿವರ್ತಿಸುತ್ತಾರೆ. ತಾನು ಮಾಡಿದ ಪಾಪಕ್ಕೆ ತಾನೊಬ್ಬನೇ ಹೊಣೆಗಾರ ಎಂಬ ಕಹಿ ಸತ್ಯ ಅರಿತ ಆತ ಸುದೀರ್ಘ ಅವಧಿಯವರೆಗೆ ತಪಸ್ಸಿಗೆ ಕುಳಿತಾಗ, ಆತನ ಸುತ್ತಲೂ ಇರುವೆಯ ಹುತ್ತ ಬೆಳೆಯುತ್ತದೆ. ತರುವಾಯ ಆತನನ್ನು ಹುಡುಕಿಕೊಂಡು ಬಂದ ನಾರದರೇ, ಆತನ ಸುತ್ತ ಬೆಳೆದಿದ್ದ ಹುತ್ತವನ್ನು ಅಥವಾ ವಲ್ಮೀಕವನ್ನು ಜಾಗರೂಕತೆಯಿಂದ ತೆಗೆದುಹಾಕಿ, ಆತನಿಗೆ ವಾಲ್ಮೀಕಿ ಎಂಬ ಹೆಸರು ನೀಡಿ, ರಾಮಾಯಣದ ಕಥೆ ಹೇಳುತ್ತಾರೆ. ಧ್ಯಾನದಿಂದ ಜ್ಞಾನ ಪಡೆದ ವಾಲ್ಮೀಕಿಂಮೂ ಮಹರ್ಷಿಯಾಗಿ ಗಂಗಾ ನದಿಯ ತಟದಲ್ಲಿ ಆಶ್ರಮ ಸ್ಥಾಪಿಸಿಕೊಂಡು, ರಾಮಾಯಣದ ಉತ್ತರಾರ್ಧದಲ್ಲಿ ಲವಕುಶರಿಗೆ ಗುರುಗಳಾಗುತ್ತಾರೆ.



ಮತ್ತೊಂದು ಕಥೆ ವಾಲ್ಮೀಕಿ ವರುಣ ದೇವರ ಹತ್ತನೇ ಮಗ. ವರುಣನ ಬೀಜವು ಗೆದ್ದಲು ಬೆಟ್ಟಕ್ಕೆ ಬಿದ್ದ ನಂತರ ವಾಲ್ಮೀಕಿ ಜನಿಸಿದನು. ಇದರಿಂದಾಗಿ ಅವನಿಗೆ "ವಾಲ್ಮೀಕಿ" ಎಂಬ ಹೆಸರು ಬಂದಿತೆಂದು ಹೇಳಲಾಗುತ್ತದೆ. ವಾಲ್ಮೀಕಿ ಋಷಿಯಾಗುವ ಮೊದಲು ತನ್ನ ಯೌವ್ವನದದಿನಗಳಲ್ಲಿಕಳ್ಳನಾಗಿದ್ದನೆಂದು ಸ್ಕಂದ ಪುರಾಣದ ನಾಗರ ಖಂಡವು ತಿಳಿಸುತ್ತದೆ. ಮುಖರ ತೀರ್ಥದ ಸೃಷ್ಟಿಯ ಕುರಿತಾದ ತನ್ನ ವಿಭಾಗದಲ್ಲಿ ವಾಲ್ಮೀಕಿ ಲೋಹಜಂಘ ಎಂಬ ಹೆಸರಿನ ಬ್ರಾಹ್ಮಣನಾಗಿ ಜನಿಸಿದನೆಂದು ಮತ್ತು ಅವನ ಹೆತ್ತವರಿಗೆ ನಿಷ್ಠಾವಂತ ಮಗನಾಗಿದ್ದನೆಂದು ಉಲ್ಲೇಖಿಸುತ್ತದೆ. ಅವನಿಗೆ ಸುಂದರ ಹೆಂಡತಿಯಿದ್ದಳು. ಒಮ್ಮೆ, ಅನಾರ್ತ ಪ್ರದೇಶದಲ್ಲಿ ಹನ್ನೆರಡು ವರ್ಷಗಳ ಕಾಲ ಮಳೆ ಬಾರದಿದ್ದಾಗ, ಲೋಹಜಂಘನು ತನ್ನ ಹಸಿದ ಕುಟುಂಬಕ್ಕಾಗಿ, ಕಾಡಿನಲ್ಲಿ ಸಿಕ್ಕ ಜನರನ್ನು ದೋಚಲು ಪ್ರಾರಂಭಿಸಿದನು. ಜೀವನ ನಿರ್ವಹಣೆಗಾಗಿ ಕಳ್ಳತನ ಮಾಡುತ್ತಿದ್ದನು. ಒಮ್ಮೆ ಹಾದಿಯಲ್ಲಿ ಸಪ್ತಋಷಿಗಳನ್ನು ಭೇಟಿಯಾಗಿ ಅವರನ್ನೂ ದೋಚಲು ಪ್ರಯತ್ನಿಸಿದನು. ಆದರೆ ವಿದ್ವಾಂಸರಾದ ಋಷಿಗಳು ಅವನ ಮೇಲೆ ಕರುಣೆ ತೋರಿ, ಅವನು ಮಾಡುತ್ತಿರುವುದು ತಪ್ಪೆಂದು ತಿಳಿಸಿದರು. ಅವರಲ್ಲಿ ಪುಲಹನೆಂಬ ಋಷಿಯು ಒಂದು ಮಂತ್ರವನ್ನುಪದೇಶಿಸಿ, ಧ್ಯಾನ ಮಾಡುವಂತೆ ಹೇಳಿದನು. ಮಂತ್ರ ಪಠಣದಲ್ಲಿ ಮಗ್ನನಾಗಿದ್ದ ರತ್ನಾಕರನ ದೇಹದ ಸುತ್ತಲೂ ಇರುವೆಗಳ ಗುಡ್ಡಗಳು ಬೆಳೆದವು. ಋಷಿಗಳು ಹಿಂತಿರುಗಿ ಬರುವಾಗ ಇರುವೆ ಗೂಡಿನಿಂದ ಬರುತ್ತಿದ್ದ ಮಂತ್ರದ ಶಬ್ದವನ್ನು ಕೇಳಿಸಿಕೊಂಡು, ರತ್ನಾಕರನನ್ನು ಆಶೀರ್ವದಿಸಿ, "ನೀನು ವಾಲ್ಮೀಕ (ಇರುವೆ ಗೂಡಿನೊಳಗೆ ಕುಳಿತು) ಮಹಾನ್ ಸಿದ್ಧಿಯನ್ನು ಸಾಧಿಸಿದ್ದರಿಂದ, ನೀನು ಲೋಕದಲ್ಲಿ ವಾಲ್ಮೀಕಿ ಎಂದು ಪ್ರಸಿದ್ಧನಾಗುತ್ತೀಯ" ಎಂದು ಹರಸಿದರಂತೆ. ಮತ್ತೊಂದು ಐತಿಹ್ಯದ ಪ್ರಕಾರ ನಾರದ ಮುನಿಗಳ ಮಾತುಗಳಿಂದ ಪ್ರೇರಿತನಾದ ರತ್ನಾಕರ ತಪಸ್ಸು ಮಾಡಲು ಪ್ರಾರಂಭಿಸಿದನು. "ಮರಣ" ಎಂಬ ಅರ್ಥವಿರುವ "ಮಾರ" ಎಂಬ ಪದವನ್ನು ಜಪಿಸಿದನು. ಅವನು ಹಲವಾರು ವರ್ಷಗಳ ಕಾಲ ತಪಸ್ಸು ಮಾಡುತ್ತಿದ್ದಾಗ, ಆ ಪದವು "ರಾಮ"ವಾಯಿತು. ವಿಷ್ಣು ದೇವರ ಹೆಸರಾಯಿತೆಂದು ಹೇಳುತ್ತದೆ.

**ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ**
**ಶಾಶ್ವತೀಃ ಸಮಾಃ।**
**ಯತ್ಕ್ರೌಂಚಮಿಥುನಾದೇಕಮವಧೀಃ**
**ಕಾಮಮೋಹಿತಮ್ ॥**

ಈ ಶ್ಲೋಕವು ಗದ್ಯರೂಪದಲ್ಲಿರದೆ, ಪ್ರಾಸಬದ್ಧವಾಗಿ, ಲಯ ಛಂದಸ್ಸುಗಳಿಂದ ಕೂಡಿದ್ದು ರಾಮಾಯಣ ರಚನೆಗೆ ಪ್ರೇರಣೆಯಾಯಿತು. ಕಣ್ಣೆದುರು ನಡೆದ ಘಟನೆಗೆ ಪ್ರತಿಕ್ರಿಯೆಯಾಗಿ ಶ್ಲೋಕ ರೂಪದಲ್ಲಿ ಶೋಕದಿಂದ ವಾಲ್ಮೀಕಿಯವರು ನುಡಿದ ಈ ಶ್ಲೋಕದ ಅರ್ಥವೇನೆಂದರೆ

**ಅಕಾರಣವಾಗಿ ಹಕ್ಕಿಯನ್ನು ಕೊಂದ**
**ಹೇ ಅನ್ಯಾಯಿ।**
**ನಿನ್ನ ಪಾಪದ ಫಲವಾಗಿ ನೀ**
**ಈ ಕೂಡಲೇ ಸಾಯಿ ॥**

ಇದೇ ವೇಳೆಗೆ ಬ್ರಹ್ಮದೇವರು ಮಹರ್ಷಿಗಳ ಆಶ್ರಮಕ್ಕೆ ಬಂದು ಇದೇ ಶ್ಲೋಕರೂಪದಲ್ಲಿ ರಾಮಾಯಣ ಕಾವ್ಯ ರಚಿಸಲು ಹೇಳುತ್ತಾರಂತೆ. ನಾರದರು ತಮಗೆ ಸಂಗ್ರಹವಾಗಿ ಹೇಳಿದ್ದ ರಾಮನ ಕಥೆಯನ್ನು ವಾಲ್ಮೀಕಿ ಮಹರ್ಷಿಗಳು 24000 ಶ್ಲೋಕಗಳನ್ನೊಳಗೊಂಡ ಮಹಾಕಾವ್ಯವಾಗಿ ಬರೆದರು. ಇದು ಏಳು ಖಂಡಗಳನ್ನು ಒಳಗೊಂಡಿದೆ. ಸುಮಾರು 480,002 ಪದಗಳಿಂದ ಕೂಡಿದ್ದು, ಮಹಾಭಾರತ ಮಹಾಕಾವ್ಯದ ನಾಲ್ಕು ಪಟ್ಟು ಉದ್ದವಾಗಿದೆ.

ರಾಮಾಯಣವು ಸೂರ್ಯವಂಶದ, ಕೋಸಲ ಸಾಮ್ರಾಜ್ಯದ ಅಯೋಧ್ಯಾ ನಗರಿಯ ದಶರಥನ ಪುತ್ರ ರಾಜಕುಮಾರ ಶ್ರೀರಾಮನ ಜೀವನಗಾಥೆಯನ್ನು ಹೇಳುತ್ತದೆ. ಆದರ್ಶ ಪುರುಷ ರಾಮನು ತಂದೆಯು ನೀಡಿದ ವಚನಕ್ಕಾಗಿ ರಾಜ್ಯಬಿಟ್ಟು ವನವಾಸಕ್ಕೆ ಹೋದಾಗ, ಆತನ ಪತ್ನಿ ಸೀತೆಯನ್ನು ಲಂಕಾದ ರಾಕ್ಷಸ ರಾವಣ ಅಪಹರಿಸುತ್ತಾನೆ. ರಾವಣನನ್ನು ಸಂಹರಿಸಿ, ಸೀತೆಯನ್ನು ಕರೆದುಕೊಂಡು ಅಯೋಧ್ಯೆಗೆ ಬಂದ ರಾಮನಿಗೆ ಅಗಸನ ಮಾತು ಕಂಟಕವಾಗುತ್ತದೆ. ರಾಮನು ತುಂಬು ಗರ್ಭಿಣಿ ಸೀತೆಯನ್ನು ಪರಿತ್ಯಾಗ ಮಾಡುತ್ತಾನೆ. ರಾಮನ ಆಜ್ಞೆಯಂತೆ ಲಕ್ಷಣನು ಸೀತೆಯನ್ನು ವಾಲ್ಮೀಕಿ ಮುನಿಯ ಆಶ್ರಮದ ಹತ್ತಿರ ಕಾಡಿನಲ್ಲಿ ಬಿಟ್ಟು ಹೋಗುತ್ತಾನೆ ಶೋಕತಪ್ತಳಾಗಿದ್ದ ಸೀತೆಯನ್ನು ವಾಲ್ಮೀಕಿ ಮಹರ್ಷಿಗಳು ತಮ್ಮ ಆಶ್ರಮಕ್ಕೆ ಕರೆತಂದು, ಋಷಿಪತ್ನಿಯರ ಮೂಲಕ ಆಕೆಯನ್ನು ಉಪಚರಿಸಿ, ಆದರಿಸುತ್ತಾರೆ. ಅಲ್ಲೇ ಲವ-ಕುಶರ ಜನನವಾಗುತ್ತದೆ. ಆ ಅವಳಿ ಮಕ್ಕಳಿಗೆ ವಾಲ್ಮೀಕಿ ಮಹರ್ಷಿಗಳೇ ಗುರುಗಳಾಗುತ್ತಾರೆ. ರಾಮಾಯಣ ಮಹಾಕಾವ್ಯದ ಗಾಯನವನ್ನು ಲವ-ಕುಶರಿಗೆ ಕಲಿಸಿಕೊಡುತ್ತಾರೆ. ರಾಮನ ಸಮಕಾಲೀನರಾದ ವಾಲ್ಮೀಕಿ ಮಹರ್ಷಿಗಳು ಲವ-ಕುಶರೊಂದಿಗೆ ರಾಮನಲ್ಲಿಗೆ ಬಂದು ರಾಮಾಯಣವನ್ನು ಗಾಯನ ಮಾಡುತ್ತಾರೆ. ರಾಮನಿಗೆ ಲವ ಕುಶ ತನ್ನ ಮಕ್ಕಳೆಂದು ತಿಳಿಯುವಲ್ಲಿ ಮತ್ತು ರಾಮನ ಬಳಿ ಸೀತೆಯನ್ನೂ ವಾಲ್ಮೀಕಿ ಮಹರ್ಷಿಗಳೇ ಕರೆತರುತ್ತಾರೆ. ಹೀಗೆ ರಾಮಾಯಣ ರಚನೆಯಲ್ಲಿ ಮತ್ತು ರಾಮಾಯಣ ಮಹಾಕಾವ್ಯದಲ್ಲಿ ಒಂದು ಪಾತ್ರವಾಗಿ ನಾವು ಆದಿಕವಿ ವಾಲ್ಮೀಕಿಯವರನ್ನು ಕಾಣುತ್ತೇವೆ. ನಂತರದ ತಲೆಮಾರುಗಳಲ್ಲಿ ಬಂದ ಅನೇಕ ರಾಮಾಯಣ ಪುಸ್ತಕಗಳಿಗೆ ಮೂಲ ಆಧಾರ ಗ್ರಂಥವೇ ಮಹರ್ಷಿ ವಾಲ್ಮೀಕಿಯವರ ರಾಮಾಯಣವಾಗಿದೆ.

ಹಿಂದೂ ಧರ್ಮದ ವಾಲ್ಮೀಕಿ ಪಂಥವು ವಾಲ್ಮೀಕಿಂಋವರನ್ನು ಪೂಜಿಸುತ್ತದೆ. ಅವರನ್ನು ಲಾಲ್ ಬೇಗ್ ಅಥವಾ ಬಾಳಾ ಷಾ ಎಂದೂ ಕರೆಯುತ್ತಾರೆ. ಅವರನ್ನು ಪೋಷಕ ಸಂತ ಎಂದು ಕರೆಯಲಾಗುತ್ತದೆ, ಅವರಿಗೆ ಸಮರ್ಪಿತವಾದ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ಚೆನ್ನೈ ಸಮೀಪದ ತಿರುವಣ್ಣಿಯೂರಿನಲ್ಲಿ 1300 ವರ್ಷಗಳ ಹಿಂದೆ ನಿರ್ಮಿಸಿದ ವಾಲ್ಮೀಕಿಯ ದೇವಾಲಯ ಪ್ರಮುಖವಾಗಿದೆ. ತಮಿಳುನಾಡಿನ ಸಿದ್ಧರು ಮಹರ್ಷಿ ವಾಲ್ಮೀಕಿಯನ್ನು ವನ್ಮೀಗರ್ ಎಂದು ಕರೆದು, ಅವರನ್ನು ಪೂಜಿಸುತ್ತಾರೆ.

ವಾಲ್ಮೀಕಿ ಜಯಂತಿಯನ್ನು ಕರ್ನಾಟಕ, ತಮಿಳುನಾಡು ಮಾತ್ರವಲ್ಲದೇ ಉತ್ತರ ಪ್ರದೇಶದ ಗೋರಖ್ಪುರದಲ್ಲಿ ಬಹಳ ಅದ್ದೂರಿಯಾಗಿ ಆಚರಿಸುತ್ತಾರೆ. ಹಾಗೆಯೇ ಪಂಜಾಬಿನ ಅಮೃತಸರದಲ್ಲಿರುವ ಶ್ರೀ ವಾಲ್ಮೀಕಿ ತೀರ್ಥ ದೇವಾಲಯವನ್ನು ರಾಮನ ಮಕ್ಕಳಾದ ಲವ ಮತ್ತು ಕುಶ ಅವರ ಜನ್ಮಸ್ಥಳ ಹಾಗೂ ಮಹರ್ಷಿ ವಾಲ್ಮೀಕಿ ಅವರು ರಾಮಾಯಣ ಬರೆದ ಸ್ಥಳ ಎಂದು ಹೇಳಲಾಗುತ್ತದೆ. ಅಲ್ಲಿಯೂ ಕೂಡ ವಾಲ್ಮೀಕಿ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

ಕರ್ನಾಟಕದ ರಾಜನಹಳ್ಳಿಯಲ್ಲಿರುವ ಶ್ರೀ ವಾಲ್ಮೀಕಿ ಮಾತಾ ಮಹಾ ಸಂಸ್ಥಾನವು ಮಹರ್ಷಿ ವಾಲ್ಮೀಕಿಗೆ ಸಮರ್ಪಿತವಾದ ದೇವಾಲಯವಾಗಿದೆ. ನೇಪಾಳದ ಚಿತ್ವಾನ್ ಜಿಲ್ಲೆಯಲ್ಲಿ ವಾಲ್ಮೀಕಿಯ ಮೂಲ ಆಶ್ರಮವಿದೆ. ಈ ಸ್ಥಳವು ತ್ರಿವೇಣಿ ಧಾಮ ತೀರ್ಥಯಾತ್ರೆಯ ಸ್ಥಳದ ಪಕ್ಕದಲ್ಲಿದೆ. ವಾಲ್ಮೀಕಿಸಂ ಎಂಬ ಧಾರ್ಮಿಕ ಚಳುವಳಿಯು ವಾಲ್ಮೀಕಿಯ ಬೋಧನೆಗಳನ್ನು ಆಧರಿಸಿದೆ. ಇಂದಿಗೂ ನಮ್ಮೊಂದಿಗೆ ರಾಮಾಯಣ, ರಾಮ, ಸೀತೆ, ಹನುಮಂತನ ಕುರಿತು ಕಥೆಗಳು, ಹದಿನಾಲ್ಕು ವರ್ಷದ ವನವಾಸ, ಲಂಕಾ ದಹನ, ರಾವಣ ಮರ್ಧನ, ಲವಕುಶರ ಜನನ ಇದೆಲ್ಲದರ ಮಾಹಿತಿ ದೊರೆಯಲು ಕಾರಣವೇ ನಮ್ಮ ಆದಿಕವಿ ಮಹರ್ಷಿ ವಾಲ್ಮೀಕಿ ವಿರಚಿತ ರಾಮಾಯಣ. ರಾಮಾಯಣವೆಂದರೆ ವಾಲ್ಮೀಕಿ, ವಾಲ್ಮೀಕಿ ಎಂದರೆ ರಾಮಾಯಣ ಎನ್ನುವಷ್ಟರ ಮಟ್ಟಿಗೆ ಆದಿಕವಿ ನಮ್ಮೊಳಗೆ ಚಿರಪರಿಚಿತರಾಗಿದ್ದಾರೆ. ವಾಲ್ಮೀಕಿ ಅವರ ಕುರಿತು ಅನೇಕ ಹಿರಿಯ ಸಾಹಿತಿಗಳು ಅವರದೇಯಾದ ದೃಷ್ಟಿಕೋನಗಳಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. ಅಲ್ಲದೇ ಅನೇಕ ಭಾ?ಷೆಗಳಲ್ಲಿ ಇವರ ಕುರಿತು ಚಲನಚಿತ್ರಗಳು ಕೂಡ ತೆರೆಕಂಡಿವೆ.

ವಾಲ್ಮೀಕಿ ಸಂಸ್ಕೃತದ ಆದಿಕವಿ ಮಾತ್ರವಲ್ಲದೇ, ನಮ್ಮ ಅಖಂಡ ಭಾರತದ ಐತಿಹಾಸಿಕ ಕವಿಯಾಗಿದ್ದಾರೆ. ಇವರನ್ನು ಯಾವುದೇ ಒಂದು ಜಾತಿ, ಮತ ಅಥವಾ ಪಂಥಕ್ಕೆ ಸೀಮಿತಗೊಳಿಸದೇ ಸರ್ವರು ಸಾರ್ವತ್ರಿಕವಾಗಿ, ಇವರ ಕೊಡುಗೆಯನ್ನು ಸ್ಮರಿಸುತ್ತ, ಇವರ ತತ್ವಗಳನ್ನು ಅನುಸರಿಸುತ್ತ ಇವರ ಜಯಂತಿಯ ಈ ಪುಣ್ಯ ಸಂದರ್ಭದಲ್ಲಿ ಇವರಿಗೆ ಭಕ್ತಿ ಭಾವದಿಂದ ನುಡಿ ನಮನ ಸಲ್ಲಿಸೋಣ. ಏನಂತೀರ?

* * *



**ಲತಾ ಕೆ.ಎಸ್.ಹೆಗಡೆ**
**ಬೆಂಗಳೂರು**

# ಸಮಸಮಾಜ ಬಯಸದವರು ಸಮೀಕ್ಷೆ ವಿರೋಧಿಸುತ್ತಿದ್ದಾರೆ: ಸಿದ್ದರಾಮಯ್ಯ

**ಕೊಪ್ಪಳ :** ಜನರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯಲ್ಲಿ ಯಾವ ಜಾತಿಯವರನ್ನು ತುಳಿಯುವ ಪ್ರಶ್ನೆಯಿಲ್ಲ. ಸಮಸಮಾಜ ಬಯಸದವರು ಮಾತ್ರ ಸಮೀಕ್ಷೆ ವಿರೋಧಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.
ಅವರು ಸೋಮವಾರ ಕೊಪ್ಪಳದಲ್ಲಿ ಮಾಧ್ಯಮದವರ ಜೊತೆ ಮಾತನಾಡಿ ಮೇಲ್ಜಾತಿಗಳನ್ನು ತುಳಿಯಲು ಸಮೀಕ್ಷೆ ನಡೆಸಲಾಗುತ್ತಿದೆ ಎಂಬ ಕೇಂದ್ರ ಸಚಿವ ಸೋಮಣ್ಣ ಆರೋಪಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಜನರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು ನಡೆಸದಿದ್ದರೆ, ಸಮಾಜದಲ್ಲಿ ಜನರ ಸ್ಥಿತಿಗತಿ ಬಗ್ಗೆ ಅರಿಯಲು ಸಾಧ್ಯವಿಲ್ಲ.



ಈ ಸಮೀಕ್ಷೆಯಲ್ಲಿ ಯಾವ ಜಾತಿಯವರನ್ನು ತುಳಿಯುವ ಪ್ರಶ್ನೆಯಿಲ್ಲ. ಸಮಸಮಾಜ ನಿರ್ಮಾಣವನ್ನು ವಿರೋಧಿಸುವವರು ಮಾತ್ರ ಇಂತಹ ಹೇಳಿಕೆಗಳನ್ನು ನೀಡುವ ಮೂಲಕ ಜನರ ದಾರಿ ತಪ್ಪಿಸುತ್ತಿದ್ದಾರೆ.
ಈಗಾಗಲೇ 1.10 ಕೋಟಿ ಕುಟುಂಬಗಳ ಸಮೀಕ್ಷಾ ಕಾರ್ಯ ಮುಗಿದಿದೆ. ಭಾನುವಾರ ಶೇ.63ರಷ್ಟು ಸರ್ವೇ ಕಾರ್ಯ ಪ್ರಗತಿಯಾಗಿದೆ ಎಂದರು.
ಕೊಪ್ಪಳದಲ್ಲಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ್ದಾಗ ಕಡಿಮೆ ಅಂತರದಲ್ಲಿ ಸೋತಿದ್ದರೂ, ಕೊಪ್ಪಳದ ಜನ ತನ್ನನ್ನು ಆಶೀರ್ವದಿಸಿದ್ದರು ಎಂದು ಸ್ಮರಿಸಿದ ಮುಖ್ಯಮಂತ್ರಿಗಳು ಜನತೆಗೆ ಧನ್ಯವಾದಗಳನ್ನು ತಿಳಿಸಿದರು.
ಬಲ್ಡೋಟಾ ಕಾರ್ಖಾನೆ ಯೋಜನೆ ಕುರಿತಂತೆ ಕೊಪ್ಪಳದಲ್ಲಿ ಹೋರಾಟಗಳು .ನಡೆದಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಬಲ್ಡೋಟಾ ಕಾರ್ಖಾನೆಯ ವಿಚಾರ ನ್ಯಾಯಾಲಯದಲ್ಲಿ ವಿಲೇವಾರಿ ಆಗಬೇಕಾಗಿದ್ದು ತೀರ್ಪಿನ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.
ಎಂಎಸ್ ಪಿ ಎಲ್ ಸೇರಿದಂತೆ ವಿವಿಧ ಕೈಗಾರಿಕೆಗಳಿಂದ ಬರುವ ದೂಳಿನಿಂದ ಪರಿಸರ ಮಾಲಿನ್ಯವಾಗುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರದ ಕ್ರಮ ತೆಗೆದುಕೊಳ್ಳುತ್ತಿದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿ,
ಕಾರ್ಖಾನೆಗಳಿಂದ ಬರುವ ದೂಳನ್ನು ಪರೀಕ್ಷೆ ನಡೆಸಿ, ದೂಳು ಬರದಂತೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದರು.
ಲಿಂಗಾಯತ ಧರ್ಮವನ್ನು ಪ್ರತ್ಯೇಕ ಧರ್ಮ ಎನ್ನುವ ಬಗ್ಗೆ ನಿಲುವೇನು ಎಂಬ ಪ್ರಶ್ನೆಗೆ ಉತ್ತರಿಸಿ, ಜನರು ಸ್ವಯಂಪ್ರೇರಣೆಯಿಂದ ತಮ್ಮ ಧರ್ಮವನ್ನು ತಿಳಿಸಿದಂತೆ, ಸಮೀಕ್ಷಾಗಾರರು ಧರ್ಮವನ್ನು ನಮೂದಿಸಿಕೊಳ್ಳುತ್ತಾರೆ. ಈ ಬಗ್ಗೆ ಜನರ ನಿಲುವೇ ನನ್ನ ನಿಲುವು ಎಂದರು.

## ಗೊಂದಲ ಬೇಡ; ಎಲ್ಲ ಮಾಹಿತಿ ಕೊಡಬೇಕಿಲ್ಲ; ತಂಗಡಗಿ

**ಕೊಪ್ಪಳ:** 'ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ನಡೆಸುತ್ತಿರುವ ಸಮೀಕ್ಷೆಗೆ ಗಣತಿದಾರರು ಮನೆಗೆ ಬಂದಾಗ ಮಾಹಿತಿ ನೀಡಿ, ಇಲ್ಲವೇ ಬಿಡಿ. ಎಲ್ಲ ಮಾಹಿತಿಯನ್ನೂ ನೀಡಲೇಬೇಕು ಎನ್ನುವುದು ಕಡ್ಡಾಯವೇನಿಲ್ಲ. ಈ ವಿಷಯದಲ್ಲಿ ಗೊಂದಲ ಬೇಡ' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಖಾತೆ ಸಚಿವ ಶಿವರಾಜ ತಂಗಡಗಿ ಹೇಳಿದರು.
ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ನ್ಯಾಯಾಲಯದ ಸೂಚನೆಯ ಪ್ರಕಾರವೇ ಸಮೀಕ್ಷೆ ಮಾಡಲಾಗುತ್ತದೆ. ಏಳು ಕೋಟಿ ಜನರ ಸಮೀಕ್ಷೆಯಾದರೆ ಸರ್ಕಾರದಿಂದ ಜನರಿಗೆ ಸೌಲಭ್ಯಗಳನ್ನು ಒದಗಿಸಲು ಅನುಕೂಲವಾಗುತ್ತದೆ ಎನ್ನುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಶಯವಾಗಿದೆ. ಬಡವರಿಗೆ ಒಳ್ಳೆಯದನ್ನು ಮಾಡುತ್ತಿದ್ದೇವೆ' ಎಂದರು.
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಕಾಂಗ್ರೆಸ್‌ನಲ್ಲಿ ಅಲ್ಲೋಲ ಕಲ್ಲೋಲ ಆಗಿದೆ ಎಂದು ಹೇಳಿಕೆ ನೀಡಿದ್ದಾರಲ್ಲ ಎನ್ನುವ ಪ್ರಶ್ನೆಗೆ, 'ಬಿಜೆಪಿಯಲ್ಲಿಯೇ ಅಲ್ಲೋಲ ಕಲ್ಲೋಲವಾಗಿದೆ.



ಮೊದಲು ಅವರು ತಮ್ಮ ಪಕ್ಷದ ಆಂತರಿಕ ವಿಚಾರ ನೋಡಿಕೊಳ್ಳಲಿ. ನಮ್ಮ ಪಕ್ಷದಲ್ಲಿ ನವೆಂಬರ್‌ನಲ್ಲಿ ಯಾವುದೇ ಕ್ರಾಂತಿಯಿಲ್ಲ; ಶಾಂತಿ ಮಾತ್ರ ಇದೆ' ಎಂದರು.

## ನಾನೇಕೆ ಸಿಎಂ ಆಗಬಾರದು: ಶಾಸಕ ಬಸವರಾಜ ರಾಯರಡ್ಡಿ

**ಕೊಪ್ಪಳ:** 'ರಾಜ್ಯದಲ್ಲಿ ಸಿ.ಎಂ ಆಗುವ ಆಕಾಂಕ್ಷಿಗಳ ಪಟ್ಟಿಯಲ್ಲಿ ನಾನೂ ಇದ್ದೇನೆ. ನಾನೇಕೆ ಸಿ.ಎಂ. ಆಗಬಾರದು' ಎಂದು ಶಾಸಕಬಸವರಾಜರಾಯರಡ್ಡಿಭಾನುವಾರಇಲ್ಲಿಪ್ರಶ್ನಿಸಿದರು. ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರೂ ಆದ ಅವರು ಭಾನುವಾರಸುದ್ದಿಗಾರರಜೊತೆಮಾತನಾಡಿ,'ಸಿದ್ದರಾಮಯ್ಯ ಅವರೇ 5 ವರ್ಷ ಮುಖ್ಯಮಂತ್ರಿಯಾಗಿರುತ್ತಾರೆ. ಸದ್ಯಕ್ಕೆ ಆ ಕುರ್ಚಿ ಖಾಲಿಯಿಲ್ಲ. ಡಿ.ಕೆ. ಶಿವಕುಮಾರ್ ಸಿ.ಎಂ. ಆಗಬೇಕು ಎಂದು ಕೆಲವು ಶಾಸಕರು ಹೇಳಿರುವುದರಲ್ಲಿ ತಪ್ಪೇನಿಲ್ಲ' ಎಂದರು. ಮಲ್ಲಿಕಾರ್ಜುನ ಖರ್ಗೆ ಅವರಿಗೂ ಸಿ.ಎಂ. ಸ್ಥಾನ ಕೊಟ್ಟರೆ ಸ್ವಾಗತ. ಆದರೆ ಅವರು ಪ್ರಧಾನಿಯಾಗಬೇಕು ಎನ್ನುವುದು ನನ್ನ ಆಸೆ. ನವೆಂಬರ್ ನಂತರ ಸಚಿವ ಸಂಪುಟ ವಿಸ್ತರಣೆ ಸಾಧ್ಯತೆಯಿದೆ' ಎಂದರು.


## ರಾಜ್ಯ ರಾಜಕಾರಣದಲ್ಲಿ ನವೆಂಬರ್ ಕ್ರಾಂತಿಯೂ ಇಲ್ಲ, ಭ್ರಾಂತಿಯೂ ಇಲ್ಲ: ಸಿಎಂ




**ಕೊಪ್ಪಳ :** ರಾಜ್ಯದ ರಾಜಕಾರಣದಲ್ಲಿ ನವೆಂಬರ್ ನಲ್ಲಿ ಯಾವ ಕ್ರಾಂತಿಯೂ ಇಲ್ಲ, ಭ್ರಾಂತಿಯೂ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.
ತಾಲ್ಲೂಕಿನ ಬಸಾಪುರದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಅವರು ಮಾತನಾಡಿದರು.
ಅಲ್ಲೋಲಕಲ್ಲೋಲ: ಬಿ.ವೈ. ವಿಜಯೇಂದ್ರ
ಜಿಲ್ಲಾ ಕೇಂದ್ರದ ಸಮೀಪದಲ್ಲಿ ಬಲ್ಡೋಟಾ ಕಂಪನಿ ಕಾರ್ಖಾನೆ ವಿಸ್ತರಣೆ ಮಾಡುವ ಕುರಿತು ಕೇಳಲಾದ ಪ್ರಶ್ನೆಗೆಕಾರ್ಖಾನೆಗಾಗಿಜಮೀನುಕಳೆದುಕೊಂಡವರಿಗೆ ಇನ್ನಷ್ಟು ಪರಿಹಾರ ಕೊಡಬೇಕು ಎನ್ನುವ ಬೇಡಿಕೆಯಿದ್ದು, ಈ ಪ್ರಕರಣ ನ್ಯಾಯಾಲಯದಲ್ಲಿದೆ ಎಂದರು.
ಸಮೀಕ್ಷೆ ಮಂಗಳವಾರ ಪೂರ್ಣಗೊಳ್ಳುವ ವಿಶ್ವಾಸವಿದೆ. ಮುಗಿಯದಿದ್ದರೆ ದಿನಾಂಕ ವಿಸ್ತರಣೆ ಬಗ್ಗೆ ಚರ್ಚಿಸಲಾಗುವುದು. ನಾಳೆ ಸಂಜೆ ತನಕ ಕಾದು ನೋಡುತ್ತೇವೆ. ಕೊಪ್ಪಳ ಜಿಲ್ಲೆಯಲ್ಲಿ ಶೇ 97 ರಷ್ಟು ಸಮೀಕ್ಷೆ ಕಾರ್ಯ ಪೂರ್ಣಗೊಂಡಿದೆ. ಉಳಿದೆಡೆಯೂ ಚುರುಕಾಗಿದೆ ಎಂದರು.

# ನಾಲ್ಕು ತಾಲ್ಲೂಕುಗಳಲ್ಲಿ ಸಮೀಕ್ಷಾ ಕಾರ್ಯ ಪೂರ್ಣ: ಮೊದಲ ಸ್ಥಾನದಲ್ಲಿ ಕೊಪ್ಪಳ

**ಕೊಪ್ಪಳ :** ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಕುರಿತು ಸಮೀಕ್ಷಾ ಕಾರ್ಯಕ್ಕೆ ಆರಂಭದಲ್ಲಿ ಎದುರಾದ ಅನೇಕ ಅಡೆತಡೆಗಳನ್ನೂ ದಾಟಿರುವ ಜಿಲ್ಲಾಡಳಿತ ಭಾನುವಾರ ರಾತ್ರಿ ಅಂತ್ಯಕ್ಕೆ ಶೇ 96.06ರಷ್ಟು ಸಮೀಕ್ಷಾ ಕಾರ್ಯ ಪೂರ್ಣಗೊಳಿಸಿ ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದೆ.
ಒಟಿಪಿ ಬಾರದಿರುವುದು, ನೆಟ್‌ವರ್ಕ್ ಸಮಸ್ಯೆ, ಸರಿಯಾಗಿ ಮ್ಯಾಪಿಂಗ್ ಮಾಡದಿರುವುದು ಹೀಗೆ ಅನೇಕ ಸಮಸ್ಯೆಗಳು



ಕಾಡಿದ್ದರಿಂದ ಸಮೀಕ್ಷೆ ಮಾಡಲು ಮನೆಮನೆಗೆ ತೆರಳಿರುವ ಸಿಬ್ಬಂದಿ

ಆರಂಭದಲ್ಲಿ ಸಾಕಷ್ಟು ಸಂಕಷ್ಟ ಎದುರಿಸಿದ್ದರು.
ಜೆಸ್ಕಾಂ ಸಿಬ್ಬಂದಿ ನೆರವಿನಿಂದ ಜಿಲ್ಲೆಯಲ್ಲಿ ಒಟ್ಟು 3,21,980 ಮನೆಗಳಿಗೆ ಜಿಯೊ ಟ್ಯಾಗಿಂಗ್ ಮಾಡಲಾಗಿದ್ದು, ಮೂರು ಸಾವಿರಕ್ಕೂ ಅಧಿಕ ಸಿಬ್ಬಂದಿಯನ್ನು ಈ ಕೆಲಸಕ್ಕಾಗಿ ನಿಯೋಜನೆ ಮಾಡಲಾಗಿದೆ.
ಕಾರಟಗಿ, ಕನಕಗಿರಿ, ಯಲಬುರ್ಗಾ, ಕುಕನೂರು ತಾಲ್ಲೂಕುಗಳಲ್ಲಿ ಸಮೀಕ್ಷಾ ಕಾರ್ಯ ಶೇ 100ರಷ್ಟು ಪೂರ್ಣಗೊಂಡಿದ್ದು, ಕುಷ್ಟಗಿ ಮತ್ತು ಗಂಗಾವತಿ ತಾಲ್ಲೂಕಿನಲ್ಲಿ ಸೋಮವಾರ ಮುಗಿಯಲಿದೆ ಎಂದು ಜಿಲ್ಲಾಧಿಕಾರಿ ಸುರೇಶ ಇಟ್ನಾಳ ತಿಳಿಸಿದ್ದಾರೆ.
ಕೊಪ್ಪಳ ತಾಲ್ಲೂಕು ವ್ಯಾಪ್ತಿಯಲ್ಲಿ ಸಣ್ಣಪುಟ್ಟ ಗೊಂದಲಗಳಾಗಿದ್ದು ತ್ವರಿತವಾಗಿ ಪರಿಹರಿಸಿ ಕಾಲಮಿತಿಯೊಳಗೆ ಮುಗಿಸಲಾಗುವುದು ಎಂದು ಅವರು ಹೇಳಿದರು. ಕೊಪ್ಪಳ ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿದೆ ಎಂದರು.

## ಕೊಲ್ಹಾರ ಪಟ್ಟಣದಲ್ಲಿ ಹೈಟೆಕ್ ಬಸ್ ನಿಲ್ದಾಣ ನಿರ್ಮಾಣಕ್ಕೆ ಮನವಿ



**ಕೊಲ್ಹಾರ:** ತಾಲೂಕಿನವಿವಿಧಅಭಿವೃದ್ಧಿಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿದ ಜವಳಿ, ಸಕ್ಕರೆ, ಕಬ್ಬು ಅಭಿವೃದ್ಧಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರಿಗೆ ಡಿಎಸ್‌ಎಸ್ ಮುಖಂಡ ಪರಶುರಾಮ ಚಿಮ್ಮಲಗಿ ಅವರು ಹೊಸ ಹೈಟೆಕ್ ಬಸ್ ನಿಲ್ದಾಣ ನಿರ್ಮಾಣಕ್ಕೆ ಮನವಿ ಸಲ್ಲಿಸಿದರು.
ಹೊಸ ತಾಲೂಕು ಕೇಂದ್ರವಾದ ಕೊಲ್ಹಾರ ಪಟ್ಟಣದ ಬಸ್ ನಿಲ್ದಾಣ ಸಂಖ್ಯೆ 1ರಲ್ಲಿ ಸುಮಾರು ಮೂರು ಎಕರೆ ಸರ್ಕಾರಿ ಜಾಗವಿದ್ದು, ಕಳೆದ ಸುಮಾರು 20 ವರ್ಷಗಳಿಂದ ಯಾವುದೇ ರೀತಿಯ ನವೀಕರಣ ಅಥವಾ ಅಭಿವೃದ್ಧಿ ಕಾರ್ಯ ನಡೆದಿಲ್ಲ. ಸರಕಾರದ ಯುಕೆಪಿ ಯೋಜನೆಯಡಿ ನಿರ್ಮಿಸಲಾದ ಸಣ್ಣ ಬಸ್ ನಿಲ್ದಾಣವು ಈಗ ಸಂಪೂರ್ಣ ಸಿತಿಲಾವಸ್ಥೆಯಲ್ಲಿದೆ.
ಪ್ರಸ್ತುತ ನಿಲ್ದಾಣದಲ್ಲಿ ಸಾರಿಗೆ ನಿಯಂತ್ರಕರ ಕೋಣೆ, ಮಹಿಳೆಯರಿಗಾಗಿ ಪ್ರತ್ಯೇಕ ನಿರೀಕ್ಷಣಾಲಯ, ಹಿರಿಯ ನಾಗರಿಕರು ಹಾಗೂ ಅಂಗವಿಕಲರಿಗೆ ಆಸನ ವ್ಯವಸ್ಥೆ ಅಥವಾ ಶೌಚಾಲಯದ ಸೌಲಭ್ಯಗಳಿಲ್ಲದಿರುವುದು ಜನತೆಗೆ ಅಸೌಕರ್ಯ ಉಂಟುಮಾಡುತ್ತಿದೆ. ಮಳೆಯ ಸಮಯದಲ್ಲಿ ನೀರು ಒಳ ನುಗ್ಗಿ ಪ್ರಯಾಣಿಕರಿಗೆ ತೊಂದರೆ ಉಂಟಾಗುತ್ತಿದ್ದು, ಬೇಸಿಗೆ ವೇಳೆಯಲ್ಲಿ ಧೂಳಿನ ಸಮಸ್ಯೆಯಿಂದ ಮಕ್ಕಳಿಗೆ ಮತ್ತು ವಯೋವೃದ್ಧರಿಗೆ ತೀವ್ರ ಕಷ್ಟವಾಗುತ್ತಿದೆ.
ಈ ಹಿನ್ನೆಲೆಯಲ್ಲಿ ಪರಶುರಾಮ ಚಿಮ್ಮಲಗಿ ಅವರು ಸಚಿವರಿಗೆ ಮನವಿ ಸಲ್ಲಿಸಿ, "ಕೊಲ್ಹಾರ ಈಗ ಹೊಸ ತಾಲೂಕು ಕೇಂದ್ರವಾಗಿದೆ.
ಹುಬ್ಬಳ್ಳಿ–ವಿಜಯಪುರ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲೇ ಇರುವುದರಿಂದ ಜನಸಂಚಾರ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಆದ್ದರಿಂದ ಕೊಲ್ಹಾರ ಪಟ್ಟಣದ ಬಸ್ ನಿಲ್ದಾಣ ಸಂಖ್ಯೆ 1ರಲ್ಲೇ ಹೈಟೆಕ್ ಬಸ್ ನಿಲ್ದಾಣ ಕಾಮಗಾರಿ ಮಂಜೂರು ಮಾಡಿ, ನಿಮ್ಮ ಅಮೃತ ಹಸ್ತದಿಂದ ಅದರ ಶಂಕುಸ್ಥಾಪನೆ ನೆರವೇರಿಸಬೇಕು" ಎಂದು ವಿನಂತಿಸಿದರು.ಸಚಿವ ಶಿವಾನಂದ ಪಾಟೀಲ ಅವರು ಮನವಿಯನ್ನು ಸ್ವೀಕರಿಸಿ ಅತಿ ಶೀಘ್ರದಲ್ಲಿ ಕಾಮಗಾರಿ ಮಾಡಲಾಗುವುದು ಎಂದು ಭರವಸೆ ನೀಡಿದರು.

## ಬಡವರಿಗೆ ಬಿಜೆಪಿ ಒಂದೇ ಒಂದು ಸೂರು ಕೊಟ್ಟಿದ್ದರೆ ಇಂದೇ ರಾಜೀನಾಮೆ: ಜಮೀರ್

**ಕೊಪ್ಪಳ :** 'ರಾಜ್ಯದ ಒಬ್ಬ ಬಡವನಿಗಾದರೂ ಬಿಜೆಪಿ ತನ್ನ ಆಡಳಿತದಲ್ಲಿ ಮನೆ ನಿರ್ಮಿಸಿ ಕೊಟ್ಟಿದ್ದರೆ ರಾಜ್ಯಪಾಲರ ಬಳಿ ಹೋಗಿ ಇಂದೇ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡುವೆ' ಎಂದು ವಸತಿ ಖಾತೆ ಸಚಿವ ಬಿ.ಝಡ್. ಜಮೀರ್ ಅಹ್ಮದ್ ಖಾನ್ ಸವಾಲು ಹಾಕಿದರು.
ನಗರದಲ್ಲಿ ಸೋಮವಾರ ನಡೆದ ಸಾಧನಾ ಸಮಾವೇಶದಲ್ಲಿ ಸೇರಿದ್ದ ಸಾವಿರಾರು ಜನರ ಸಮ್ಮುಖದಲ್ಲಿ ರೋಷಾವೇಷದಿಂದ ಮಾತನಾಡಿದ ಅವರು 'ಚುನಾವಣೆಯ ಸಮಯದಲ್ಲಿ ಭರವಸೆ ನೀಡದಿದ್ದರೂ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಬಡವರಿಗೆ ಸೂರು ನಿರ್ಮಿಸಿಕೊಟ್ಟಿದ್ದೇವೆ. ಇದು ನಮ್ಮ ಆರನೆ ಗ್ಯಾರಂಟಿಯಾಗಿದೆ. ಬಿಜೆಪಿ ಇಂಥ ಒಳ್ಳೆಯ ಕೆಲಸ ಒಂದಾದರೂ ಮಾಡಿದೆಯಾ' ಎಂದು ಪ್ರಶ್ನಿಸಿದರು.
ಬಿಜೆಪಿ ಸದಾ ಧಮ್ಮು, ತಾಕತ್ತು ಎಂದು ಮಾತನಾಡುತ್ತ ಹಿಂದೂ ಮುಸ್ಲಿಮರ ನಡುವೆ ಬೆಂಕಿ ಹಚ್ಚುವ ಕೆಲಸ



ಮಾಡುತ್ತಿದೆ. ಬಿಜೆಪಿ ರಾಜ್ಯದಲ್ಲಿ ಸ್ವಂತ ಶಕ್ತಿಯಲ್ಲಿ ಎಂದೂ ಅಧಿಕಾರಕ್ಕೆ ಬಂದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಮಹನೀಯರ ಮಾರ್ಗದರ್ಶನ ಒಂದಿದ್ದರೇ ಜಗತ್ತನ್ನೇ ಗೆಲ್ಲಬಹುದು : ಹಮೀದ ಮುಶ್ರೀಫ್

**ವಿಜಯಪುರ:** ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಶಾಂತತೆಯನ್ನು ಅಳವಡಿಸಿಕೊಂಡು ಜಗತ್ತಿಗೆ ಮಾದರಿಯಾಗಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಹಮೀದ ಮುಶ್ರೀಫ್ ಹೇಳಿದರು.
ನಗರದಚಾಂದನಿಮಂಗಲಕಾರ್ಯಾಲಯ ಸುವಿಧಾ ಸಾಮಾಜಿಕ ಸಂಸ್ಥೆವತಿಯಿಂದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಹಾಗೂ ಲಾಲಬಹಾದ್ದೂರ ಶಾಸ್ತ್ರೀ ಅವರ ಜನ್ಮ ದಿನಾಚರಣೆ ಪ್ರಯುಕ್ತ ವಿಶ್ವಶಾಂತಿಗಾಗಿ ಕವಿಗೋಷ್ಠಿ (ಮುಶಾಯಿರಾ) ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು.
ನಾವು ಯಾವುದೇ ಸಂದರ್ಭದಲ್ಲಿ ಒತ್ತಡಕ್ಕೆ ಮಣಿಯದೇ ಬರುವ ಸಮಸ್ಯೆಯನ್ನು ಶಾಂತಿಯುತವಾಗಿ ಎದರುಸಿದರೆ ಮುಂಬರುವ ಸಮಸ್ಯೆಗೆ ವಿರಾಮ ಹೇಳಬಹುದು. ಇಂದಿನ ಯುವಕರು ಇದನ್ನು ಮನಗಂಡು ಮಹನೀಯರ ಮಾರ್ಗದರ್ಶನ ಒಂದಿದ್ದರೇ ಜಗತ್ತನ್ನೇ ಗೆಲ್ಲಬಹುದು ಎಂಬುವುದು ಅರಿಯಬೇಕು




ಎಂದರು.
ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಫಯಾಜ್ ಕಲಾದಗಿ ಮಾತನಾಡಿ, ಇಂದಿನ ಯುವ ಪೀಳಿಗೆಗೆ ದೇಶಕ್ಕಾಗಿ ತ್ಯಾಗ, ಬಲಿದಾನ ಮಾಡಿದ ದಾರ್ಶನಿಕರ ಜೀವನವನ್ನು ನಾವೆಲ್ಲರೂ ಸ್ಮರಿಸಬೇಕು. ದೇಶದ ಅಭಿವೃದ್ಧಿಗಾಗಿ ಯುವಕರ ಪಾತ್ರ ಬಹಳ ಮುಖ್ಯವಾಗಿದೆ. ಯಾವುದೇ ದುಶ್ಚಟಕ್ಕೆ ಬಲಿಯಾಗದೇ ಸಮಾಜಕ್ಕೆ ನಾವೆಲ್ಲರೂ ಸಂದೇಶ ಸಾರವಂತಹ ಕೆಲಸ ಮಾಡಬೇಕಾಗಿದೆ. ಈ ಹಿನ್ನೆಲೆ ನಮ್ಮ ರಾಷ್ಟ್ರೀಯ ನಾಯಕರಾದ ಮಹಾತ್ಮಾ ಗಾಂಧೀಜಿ, ಶಾಸ್ತ್ರೀಯವರ ಕೊಡುಗೆ ಅನನ್ಯವಾಗಿದೆ ಎಂದರು.
ಈ ಸಂದರ್ಭದಲ್ಲಿ ಕರವೇ ಮುಖಂಡ ಎಂ.ಸಿ. ಮುಲ್ಲಾ ಮಾತನಾಡಿದರು.
ವೇದಿಕೆಯ ಮೇಲೆ ಎಸ್.ಎಮ್. ಪಾಟೀಲ (ಗಣಿಯಾರ), ಆಝಾದ ಪಟೇಲ, ಸಜ್ಜಾದೇಪೀರ ಮುಶ್ರೀಫ್, ಶಂಕರಗೌಡ ಹಿರೇಗೌಡರ, ಜಮೀರ ಬಾಂಗಿ, ಮೋಮಿನ ಕಲಾದಗಿ, ಇದ್ರೂಸ್ ಬಕ್ಷಿ, ಎಸ್.ಎ. ಜಮಾದಾರ, ಶಬ್ಬೀರ ಥಾಲಾಯತ, ಇಲಿಯಾಸ್ ಸಿದ್ದಿಕಿ, ಮಹಾದೇವ ರಾವಜಿ, ಜಮೀರ ಗೋಲೆವಾಲೆ, ಹಮೀದ ಅಥಣಿ ಮುಂತಾದವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.
ಕಲಬುರಗಿ, ಶಿವಮೊಗ್ಗಾ, ಬೀದರ, ಸೊಲ್ಲಾಪೂರ ಕವಿಗಳು ಕವನ ವಾಚಿಸಿದರು.
ಕಾರ್ಯಕ್ರಮದಲ್ಲಿ ಎಚ್.ಎಸ್. ಕಬಾಡೆ, ಮಹ್ಮದ್‌ನಸ್ಸೀಂ ರೋಜಿನದಾರ, ಮಹ್ಮದಸಾದೀಕ ಜಾನ್ವೇಕರ, ಅಕ್ತರಹುಸೇನ ಮುತವಲ್ಲಿ, ದಾದಾಪೀರ ಮುಜಾವರ, ಸಂತೋಷ ಮುಧೋಳ, ಫಿದಾ ಕಲಾದಗಿ, ಅಕ್ರಂ ಮಾಶ್ಯಾಳಕರ, ಅನ್ವರ ಜಮಾದಾರ, ದಸ್ತಗೀರ ಸಾಲೋಟಗಿ, ದಸ್ತಗೀರ ಶಾನವಾಲೆ, ಅಬೂಬಕರ್ ಅಂಬರಖಾನೆ, ಅಬ್ದುಲನಬಿ ಜಮಾದಾರ, ಲತೀಫ್ ಕಲಾದಗಿ, ಎಸ್.ಕೆ. ಇನಾಮದಾರ, ಪರವೇಜ ಕಲಾದಗಿ, ಆಝುಮ್ ಶೇಖ ಮುಂತಾದವರು ಇದ್ದರು.ಸಾಯೆಫ್ ಅವಟಿ ನಿರೂಪಿಸಿದರು. ಮುಜಿಮಿಲ್ ಮುಲ್ಲಾ ವಂದಿಸಿದರು.

## ಉರ್ದು ಭಾಷೆಯ ಉಳಿವಿಗಾಗಿ ಮತ್ತು ವಿಕಾಸಕ್ಕಾಗಿ ಕವಿ ಗೋಷ್ಠಿ

**ಇಂಡಿ :** ಉರ್ದು ಭಾಷೆಯ ಉಳಿವು ಮತ್ತು ವಿಕಾಸಕ್ಕಾಗಿ ಇಂತಹ ಕವಿಸಮ್ಮೇಳನಗಳು ಬಹಳ ಅಗತ್ಯ. ಕವಿಗಳ ಹೊಣೆಗಾರಿಕೆ ಎಂದು ತಮ್ಮ ಕಾವ್ಯದ ಮೂಲಕ ಉರ್ದು ಭಾಷೆಯ ರಕ್ಷಣೆ ಮಾಡುವುದು. ಇಂದಿನ ಸಮಾಜದಲ್ಲಿ ಮಾನವೀಯತೆ ಎಂದು ಆಶಿಫ್ ಬಾಲಸಿಂಗ ಹೇಳಿದರು.ನಗರದ ಅಂಜುಮನ್ ಡಿ.ಎಡ್ ಕಾಲೇಜಿನಲ್ಲಿ ಇಂಡಿಯ ಯುವಕರ ಆಶ್ರಯದಲ್ಲಿ ಒಬ್ಬ ಪೌರಾಣಿಕ ಮತ್ತು ವೈಭವಶಾಲಿ ಕವಿಸಮ್ಮೇಳನ ಮುಖ್ಯ ಅಥಿತಿ ಮಾತನಾಡಿದರು. ಈ ಸಂದರ್ಭದಲ್ಲಿ ಸ್ಥಳೀಯಹಾಗೂಹೊರಗಿನಿಂದಆಗಮಿಸಿದ ಕವಿಗಳು ತಮ್ಮ ಸುಂದರ ಕಾವ್ಯಗಳ ಮೂಲಕ ಎಲ್ಲರ ಮನಸ್ಸನ್ನು ಆಕರ್ಷಿಸಿದರು.
ಕಾರ್ಯಕ್ರಮದಅಧ್ಯಕ್ಷತೆವಹಿಸಿದಇಂಡಿಯ ಖ್ಯಾತನಿವೃತ್ತಶಿಕ್ಷಕಜನಾಬ್‌ಫಾರೂಕ್‌ತುರ್ಕಿ ಅವರು ಮಾತನಾಡಿ "ಒಂದಾನೊಂದು ಕಾಲದಲ್ಲಿ ಇಂಡಿ ನಗರ ಉರ್ದು ಭಾಷೆಯ ಪ್ರೋತ್ಸಾಹಕ್ಕಾಗಿ ಪ್ರಸಿದ್ಧವಾಗಿತ್ತು. ಆದರೆ ಇಂದು ಉರ್ದು ಕಡೆಗಣನೆಯಾಗುತ್ತಿದೆ. ಇಂತಹ ಕವಿಸಮ್ಮೇಳನಗಳು ಕೇವಲ ಭಾಷೆಯ ನೆನಪನ್ನು ಮಾತ್ರ ತಾಜಾ ಮಾಡುವುದಲ್ಲ, ಯುವಕರಲ್ಲಿ ಸಾಹಿತ್ಯ ಪ್ರೀತಿಯನ್ನು ಬೆಳೆಸುತ್ತವೆ. ಇಂಡಿಯ




ಯುವಕರು ಉರ್ದು ಭಾಷೆಯನ್ನು ಉಳಿಸಲು ಶ್ರಮಿಸುತ್ತಿರುವುದನ್ನು ಕಂಡು ನನಗೆ ಅಪಾರ ಸಂತೋಷವಾಯಿತು. ಅಲ್ಲಾ ಅವರಿಗೆ ಯಶಸ್ಸು ನೀಡಲಿ."
ಈ ಸಂದರ್ಭದಲ್ಲಿ ಮಹಮೂದ್ ಇನಾಮ್ದಾರ ಮಹಮೂದ್, ಮೊಮಿನ್ ಬೀಜಾಪೂರಿ, ಮುಜೀಬ್ ಅಹ್ಮದ್ ಮುಜೀಬ್, ಶುವೈಬ್ ಅಖ್ತರ್ ಶುವೈಬ್, ಮೊಹಮ್ಮದ್ ನಾಸಿರ್ ಜಝ್ಬಾತಿ, ಅಹ್ಮದ್ ಜಾವೇದ್ ಮುಂತಾದವರು ತಮ್ಮ ಕಾವ್ಯವನ್ನು ವಾಚಿಸಿದರು.
ಕವಿಗಳವರುಉರ್ದುಭಾಷೆಯಪ್ರೀತಿ,ಅದರ ವಿಕಾಸ, ಧರ್ಮ ಮತ್ತು ಇಸ್ಲಾಂ ರಕ್ಷಣೆಯ ಕುರಿತಾಗಿ ಕವನಗಳನ್ನು ವಾಚಿಸಿದರು. ಕೆಲವರು ಜಗತ್ತಿನಾದ್ಯಂತ ಮುಸ್ಲಿಮರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳ ಕುರಿತಾಗಿ, ಹಾಗೆಯೇ ಮನುಷ್ಯನು ತನ್ನದೇ ಕೃತ್ಯಗಳಿಂದ ಬಳಲುತ್ತಿರುವ ಸ್ಥಿತಿಯ ಕುರಿತಾದ ಕಾವ್ಯವನ್ನು ಓದಿದರು.
ಇಂಡಿಯ ಉದಯೋನ್ಮುಖ ಕವಿ ಜಾವೇದ್ ತಮ್ಮ ಹೃದಯ ಸ್ಪರ್ಶಿ ಕಾವ್ಯದಿಂದ ಎಲ್ಲರ ಮನ ಗೆದ್ದರು. ಇಂಡಿ ನಗರದ ಸೌಂದರ್ಯವನ್ನು ಹೊಗಳುವ ಅದ್ಭುತ ಕವನಗಳನ್ನು ಕೂಡಾ ವಾಚಿಸಿದರು.
ಕವಿಸಮ್ಮೇಳನದ ಯಶಸ್ವಿ ಆಯೋಜನೆಗಾಗಿ ಇಂಡಿಯ ಯುವಕರ ಪರಿಶ್ರಮವನ್ನು ಎಲ್ಲರೂ ಶ್ಲಾಘಿಸಿದರು.
"ಈಯುವಕರುಉರ್ದುಭಾಷೆಯಮೇಲಿನ ತಮ್ಮ ಪ್ರೀತಿಯನ್ನು ಕಾರ್ಯರೂಪಕ್ಕೆ ತಂದಿದ್ದಾರೆ" ಎಂದು ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದರು. ಮುಂದೆಯೂ ಇಂತಹ ಸಾಹಿತ್ಯ ಸಭೆಗಳು ನಡೆಯಲಿ ಎಂದು ಹಾರೈಸಲಾಯಿತು.
ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಜಾವೇದ್ ಅಹ್ಮದ್, ಮುಜಾಹಿದ್ ಬಾಗವಾನ್, ಹುದ್ಯೆಫಾ ಹಲ್ಲಿ, ಸರ್ಫರಾಜ್ ಕೋಕಣಿ, ಜಾವೇದ್ ಶೇಖ್, ಉಮರ್ ಬೇಪಾರಿ, ಅಯ್ಯೂಬ್ ಮಕಾಂದಾರ್, ಮುಜಮ್ಮಿಲ್ ಗುಂದಗಿ ಸೇರಿದಂತೆ ಸಾಹಿತಿ ಗಳಿಗೆ ಹಾಗೂ ಸಾಹಿತಿ ಅಸಸಕ್ತರಿಗೆ ಶ್ರಮಿಸಿದರು ಹಾಗೂ ಕ್ರತಜ್ಞತೆ ಸಲ್ಲಿಸಿದರು.
ಈ ಕಾರ್ಯಕ್ರಮದಲ್ಲಿ ಅಖಿಲ ಹವಲ್ದಾರ್, ಹುಸೇನ ಜಮಾದಾರ, ಹುಸೇನ್ ಬೇಪಾರಿ, ಮಹಿಬೂಬ್ ಬಳಗಾನೂರ, ಖಾಲಿಲ್ ಇಂಡಿಕರ್, ಶಾಕಿರ್ ಮುಲ್ಲಾ, ಆಶಿಫ್ ಜಮಾದಾರ, ಆಯೂಬ್ ನಾಟಿಕಾರ್, ಮಾಝಿದ್ ನಾಗಠಾಣ, ಸೇರಿದಂತೆ ಇತರರು ಇದ್ದರು.

# ಕುಸ್ತಿ ಪಂದ್ಯಾವಳಿ ಯಶಸ್ಸಿಗಾಗಿ ಸಂಪೂರ್ಣ ಸಹಕಾರ: ಶಾಸಕ ಅಶೋಕ ಮನಗೂಳಿ



**ಸಿಂದಗಿ:** ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿ ಸಿಂದಗಿಯಲ್ಲಿ ನಡೆಯಲಿರುವುದು ಹೆಮ್ಮೆಯ ವಿಷಯ. ಪಂದ್ಯಾವಳಿ ಯಶಸ್ಸಿಗಾಗಿ ಸಂಪೂರ್ಣ ಸಹಕಾರ ನೀಡುವೆ. ನಮ್ಮ ಶಿಕ್ಷಣ ಸಂಸ್ಥೆ ತಾಲ್ಲೂಕು ಶಿಕ್ಷಣ ಪ್ರಸಾರಕ ಮಂಡಳಿಯ ವತಿಯಿಂದ ಕುಸ್ತಿಪಟುಗಳಿಗೆ, ಜಿಲ್ಲೆಯ ಎಲ್ಲ ಪಿಯು ಕಾಲೇಜುಗಳ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ನಿರ್ಣಾಯಕರಿಗೆ ಒಟ್ಟು ಸಾವಿರಕ್ಕೂ ಅಧಿಕ ಜನರಿಗೆ ಮೂರು ದಿನಗಳು ಉಪಹಾರ, ಊಟದ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಪಟ್ಟಣದ ಹೊರವಲಯ ಬ್ಯಾಕೋಡ ರಸ್ತೆಯಲ್ಲಿನ ಎಲೈಟ್ ವಿಜ್ಞಾನ ಪಿಯು ಕಾಲೇಜಿನಲ್ಲಿ ಶನಿವಾರ ಶಾಲಾ ಶಿಕ್ಷಣ(ಪದವಿ ಪೂರ್ವ) ಇಲಾಖೆ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಾಲ್ಲೂಕು ಆಡಳಿತ ತನು,ಮನ, ಧನದಿಂದ ಸಹಾಯ-ಸಹಕಾರ ನೀಡುವುದು. ಅಲ್ಲದೇ ಕ್ರೀಡಾ ಸ್ನೇಹಿತರ ಬಳಗದಿಂದಲೂ ಆರ್ಥಿಕ ಸಹಾಯ ಮಾಡಲಾಗುವುದು ಎಂದು ತಿಳಿಸಿದರು.

ವಿಜಯಪುರ ಜಿಲ್ಲಾ ಪಿಯು ಕಾಲೇಜುಗಳ ದೈಹಿಕ ಶಿಕ್ಷಣ ಉಪನ್ಯಾಸಕರ ಸಂಘದ ಅಧ್ಯಕ್ಷ ಶಾಂತು ದುರ್ಗಿ ಪ್ರಾಸ್ತಾವಿಕವಾಗಿ ಮಾತನಾಡಿ, ದೇಶಿ ಕ್ರೀಡೆ ಕುಸ್ತಿ ರಾಜ್ಯಮಟ್ಟದ ಪಂದ್ಯಾವಳಿ ಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳ ಪಿಯು ಕಾಲೇಜುಗಳಿಂದ 900 ಕುಸ್ತಿಪಟುಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಇಲಾಖೆಯ ಶಾಖಾಧಿಕಾರಿ ಪ್ರಕಾಶ ಗೊಂಗಡಿ ಮಾತನಾಡಿ, ಪಂದ್ಯಾವಳಿ ಪಟ್ಟಣದ ತಾಲ್ಲೂಕು ಶಿಕ್ಷಣ ಪ್ರಸಾರಕ ಮಂಡಳಿಯ ಎಚ್.ಜಿ.ಪಿಯು ಕಾಲೇಜು ಮೈದಾನದಲ್ಲಿ ಅಕ್ಟೋಬರ್ 23,24 ಮತ್ತು 25 ಮೂರು ದಿನಗಳ ಕಾಲ ನಡೆಯಲಿದೆ. ಜಿಲ್ಲಾ ಸಚಿವರು, ಶಿಕ್ಷಣ ಸಚಿವರನ್ನು ಆಹ್ವಾನಿಸಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಉಪನಿರ್ದೇಶಕ ಚಂದ್ರಶೇಖರ ಹೊಸಮನಿ ಅವರು ಶಾಸಕ ಅಶೋಕ ಮನಗೂಳಿಯವರನ್ನು ಇಲಾಖೆಯ ವತಿಯಿಂದ ಸನ್ಮಾನಿಸಿದರು.ಎಲೈಟ್‌ಸಂಸ್ಥೆಯಸಂಸ್ಥಾಪಕಎಂ.ಎಂ. ಅಸಂತಾಪುರ, ವಿಜಯಪುರ ಜಿಲ್ಲಾ ಪ್ರಾಚಾರ್ಯರ ಮಹಾಮಂಡಳ ಅಧ್ಯಕ್ಷ ಕೆ.ಆಯ್.ಉಪ್ಪಾರ, ಪಿಯು ಕಾಲೇಜು ಉಪನ್ಯಾಸಕರ ಸಂಘದ ಅಧ್ಯಕ್ಷ ಎಂ.ಡಿ.ಹೆಬ್ಬಿ, ಪ್ರಾಚಾರ್ಯರಾದ ಕೆ.ಜಿ.ಲಮಾಣಿ, ಎಲ್.ಆಯ್.ಹುನಶಿಕಟ್ಟಿ, ಬಿ.ಡಿ.ದೋಟಿಹಾಳ, ಬಿ.ಎಂ.ಸಿಂಗನಳ್ಳಿ, ಎ.ಆರ್.ಹೆಗ್ಗನದೊಡ್ಡಿ ಹಾಗೂ ಬಿ.ಎಸ್.ಗೌರಿ, ಪಿ.ಸಿ.ನಾಟೀಕಾರ, ಎಸ್.ಆರ್. ಮುತ್ತಗಿ ಮತ್ತು ನಿವೃತ್ತ ದೈಹಿಕ ಶಿಕ್ಷಣ ಉಪನ್ಯಾಸಕ ಕೆ.ಎಚ್.ಸೋಮಾಪುರ ವೇದಿಕೆಯಲ್ಲಿದ್ದರು.

# ಮಹೆಬೂಬ ಸುಭಾನಿ ಉರುಸುನಲ್ಲಿ ಭಾಗಿಯಾಗಿ ಭಾವೈಕ್ಯತೆ ಸಂದೇಶ ಸಾರಿದ ಶಿವಕುಮಾರ ಸವದಿ

**ಅಥಣಿ:** ಪಟ್ಟಣದಲ್ಲಿತನ್ನದೇಆದಐತಿಹಾಸಿಕ ಧಾರ್ಮಿಕ ಮತ್ತು ಭಾವೈಕ್ಯತೆಯ ಪರಂಪರೆ ಹೊಂದಿರುವ ಮುಲ್ಲಾ ಗಲ್ಲಿಯಲ್ಲಿರುವ ಪ್ರಸಿದ್ಧ ಮಹೆಬೂಬ್ ಸುಭಾನಿ ದರ್ಗಾದ ಉರುಸು ಅನ್ನು ಪ್ರತಿ ವರ್ಷದಂತೆ ಈ ವರ್ಷವೂ ಸಂಭ್ರಮ ಸಡಗರದಿಂದ ಜರುಗಿತು. ಜಾತಿ ಭೇದ ಮರೆತು ಹಿಂದೂ-ಮುಸ್ಲಿಮರೆಲ್ಲ ಸಹೋದರತೆಯಿಂದ ಶ್ರದ್ಧೆ-ಭಕ್ತಿಯಿಂದ ಉರುಸ್ ಆಚರಿಸುತ್ತಾ ಬಂದಿದ್ದಾರೆ.



ಈ ಉರುಸು ಆಚರಣೆಗೆ ವಿವಿಧ ಸಮುದಾಯಗಳ ಭಕ್ತಾದಿಗಳು ದೂರ ದೂರದಿಂದ ಆಗಮಿಸಿ, ದೀಪಗಳಿಗೆ ಎಣ್ಣೆ ಹಾಕಿ, ಮಜಾರ ಮೇಲೆ ಗಲೀಫ ಹಾಕುವ ಮೂಲಕ ಮಹೆಬೂಬ್ ಸುಭಾನಿ ಅವರ ಆಶೀರ್ವಾದ ಪಡೆದರು.

ಉರುಸು ನಿಮಿತ್ಯ ದರ್ಗಾವನ್ನು ವಿಶೇಷ ಹೂವು ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಪೊಲೀಸ್ ಇಲಾಖೆಯ ಅಧಿಕಾರಿಗಳ ಹಾಗೂ ಸಿಬ್ಬಂದಿ ವರ್ಗದವರು ಮೆರವಣಿಗೆ ಮೂಲಕ ಗಲೀಫ್ ತಂದು ದರ್ಗಾಕ್ಕೆ ಅರ್ಪಿಸಿದರು.

ಈ ಭಾವೈಕ್ಯತಾ ಉರುಸು ಸಂಗಮದಲ್ಲಿ ಯುವ ನಾಯಕ, ಉದ್ಯಮಿ ಶಿವಕುಮಾರ್ ಸವದಿ ಅವರು ಭಾಗವಹಿಸಿ ಮಹೆಬೂಬ ಸುಭಾನಿ ಅವರು ಮಜಾರೆಗೆ ಗಲೀಫ್ ಹಾಗೂ ಹೂಮಾಲೆ ಹಾಕಿ ಆಶೀರ್ವಾದ ಪಡೆದು, ನಾಡಿಗೆ ಮಹತ್ವದ ಭಾವೈಕ್ಯತೆ ಹಾಗೂ ಸಹೋದರತ್ವದ ಸಂದೇಶ ಸಾರಿದರು.

ಈ ವೇಳೆ ಯುವ ನಾಯಕ ಹಾಗೂ ಉದ್ಯಮಿ ಶಿವಕುಮಾರ್ ಸವದಿ ಮಾತನಾಡಿ ನಮ್ಮೆಲ್ಲರ ಜಾತಿ -ಧರ್ಮಗಳು ಮತ ಪಂಥಗಳು ಬೇರೆ ಬೇರೆಯಾಗಿದ್ದರೂ, ನಾವೆಲ್ಲರೂ ಭಗವಂತನ ಮುಂದೆ ಒಂದೇ ಇಲ್ಲಿ ಯಾರೂ ಕೀಳಲ್ಲ, ಯಾರೂ ಮೇಲಿಲ್ಲ. 'ದೇವನೊಬ್ಬ ನಾಮ ಹಲವು' ಎಂಬ ಮಾತಿನಂತೆ, ನಾವು ಆಚರಿಸುವ ಪದ್ಧತಿಗಳು ಭಿನ್ನವಾಗಿರಬಹುದು. ಆದರೆ, ನಾವು ಶುದ್ಧ ಮನಸ್ಸು ಮತ್ತು ಪ್ರಾಮಾಣಿಕ ಭಕ್ತಿಯಿಂದ ಯಾವುದೇ ಹಬ್ಬಗಳು. ಉರುಸು. ಸತ್ಪುರುಷರ ಜಯಂತಿಗಳನ್ನು ಆಚರಣೆ ಮಾಡಿದರೆ, ನಮ್ಮ ಪ್ರತಿಯೊಂದು ಪ್ರಾರ್ಥನೆಯೂ ದೇವರಿಗೆ ಸಲ್ಲುತ್ತದೆ, ಎಂದ ಅವರು ದೇವಸ್ಥಾನ, ದರ್ಗಾ. ಚರ್ಚ ಹಾಗೂ ಮಸೀದಿಗಳಂತಹ ಧಾರ್ಮಿಕ ಶ್ರದ್ಧಾ ಕೇಂದ್ರಗಳು ಶಾಂತಿ ಮತ್ತು ಸಮನ್ವಯತೆ ಭಾವೈಕ್ಯತೆಯ ಕೇಂದ್ರಗಳಾಗಿವೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮುಸ್ಲಿಂ ಸಮಾಜದ ಮುಖಂಡರಾದ ಇನೂಸ್ ಮುಲ್ಲಾ, ಹಾಜಿ ಶಫೀ ಮುಲ್ಲಾ, ಹಾಜಿ ಕುತುಬುದ್ದೀನ್ ಮುಲ್ಲಾ, ದರ್ಗಾ ಕಮಿಟಿ ಅಧ್ಯಕ್ಷರಾದ ಮುಷ್ತಾಕ್ ಮುಲ್ಲಾ,

ಅಂಜುಮನ್ ಕಮಿಟಿ ಸದಸ್ಯ ಅಬ್ದುಲ್ ಅಜೀಜ್ ಮುಲ್ಲಾ, ಮಂಜು ಹೋಳಿಕಟ್ಟಿ, ಮಹಾಂತೇಶ ಬಾಡಗಿ, ಖಲೀಲ್ ಮುಲ್ಲಾ. ದಾದಾಪೀರ್ ಜಮಾದಾರ ಸೇರಿದಂತೆ ಹಲವು ಗಣ್ಯರು ಮತ್ತು ಭಕ್ತಾದಿಗಳು ಉಪಸ್ಥಿತರಿದ್ದರು.

# ಅಂಗನವಾಡಿ ಕಾರ್ಯಕರ್ತೆ ಶವ ಪತ್ತೆ: ಕೊಲೆ ಶಂಕೆ

**ಖಾನಾಪುರ :** ತಾಲ್ಲೂಕಿನ ನಂದಗಡ ಗ್ರಾಮದ ಅಂಗನವಾಡಿ ಕಾರ್ಯಕರ್ತೆ ಅಶ್ವಿನಿ ಪಾಟೀಲ (50) ಅವರ ಶವ ಭಾನುವಾರ ಬೆಳಗಾವಿ ಗೋವಾ ರಾಷ್ಟ್ರೀಯ ಹೆದ್ದಾರಿಯ ತಿನ್ನೈಘಾಟ ಬಳಿ ಸೇತುವೆಯೊಂದರ ಕೆಳಗೆ ಪತ್ತೆಯಾಗಿದೆ.



ಘಟನಾ ಸ್ಥಳಕ್ಕೆ ಉತ್ತರ ಕನ್ನಡ ಜಿಲ್ಲೆಯ ರಾಮನಗರ ಪೊಲೀಸರು ಭೇಟಿ ನೀಡಿ ಶವವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ.

ಕಳೆದ ಮೂರು ದಿನಗಳಿಂದ ಕಾಣೆಯಾಗಿದ್ದ ಅಶ್ವಿನಿ ಅವರ ಶವದ ಮುಖ ಮತ್ತು ತಲೆಯ ಭಾಗದಲ್ಲಿ ಗಾಯದ ಗುರುತುಗಳಿವೆ.

ಅಶ್ವಿನಿ ಅವರು ಅ.2 ರಂದು ನಂದಗಡದಿಂದ ಕಕ್ಕೇರಿ ಜಾತ್ರೆಗೆ ತೆರಳಿದ್ದರು.

ಜಾತ್ರೆ ಮುಗಿಸಿಕೊಂಡು ಮನೆಗೆ ಹಿಂತಿರುಗದಕಾರಣಅವರಕುಟುಂಬದ ಸದಸ್ಯರು ನಂದಗಡ ಪೊಲೀಸ್ ಠಾಣೆಯಲ್ಲಿ ನಾಪತ್ತೆ ದೂರು ದಾಖಲಿಸಿದ್ದರು.

ಭಾನುವಾರ ಪತ್ತೆಯಾದ ಅವರ ಶವದ ಬಳಿ ಅವರ ಮೊಬೈಲ್ ದೊರೆತಿದ್ದು, ಅದರಲ್ಲಿರುವ ಕೆಲವು ಸಂದೇಶಗಳು ಅವರ ಸಾವಿನ ಬಗ್ಗೆ ಹಲವು ಅನುಮಾನಗಳನ್ನು ಹುಟ್ಟುಹಾಕಿವೆ. ರಾಮನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

# ಬೆಳೆ ಹಾನಿಯಿಂದ ರೈತರಿಗೆ ಕಷ್ಟ: ಸ್ಪಂದಿಸದ ನಾಡಗೌಡಆರೋಪ

**ನಾಲತವಾಡ:** ಮಳೆಯಿಂದಹಾನಿಗೊಳಗಾದ ಬೆಳೆಗಳಿಗೆ ತಕ್ಷಣ ಪರಿಹಾರ ನೀಡುವಲ್ಲಿ ಸರ್ಕಾರವಿಫಲವಾಗಿದ್ದು,3ತಿಂಗಳನಿರಂತರ ಮಳೆಯಿಂದ ಬೆಳೆಗಳು ಹಾಳಾಗಿವೆ. ರೈತರು ಬೆಳೆ ಹಾನಿಯ ಸಂಕಷ್ಟದಲ್ಲಿದ್ದಾರೆ. ಶಾಸಕ ನಾಡಗೌಡರು ಸಂಬಂಧಿಸಿದ ಅಧಿಕಾರಿಗಳ ಸಭೆ ಕರೆಯದೇ ಇದ್ದದ್ದು, ಮತ್ತೊಂದೆಡೆ ರೈತರ ಜಮೀನುಗಳಿಗೆ ಭೇಟಿ ನೀಡದ ಶಾಸಕ ಅಪ್ಪಾಜಿ ನಾಡಗೌಡ ನಡೆ ಕ್ಷೇತ್ರದ ಬಡ ರೈತರ ದುರಂತ ಎಂದು ರಾಜ್ಯ ರೈತ ಬಿಜೆಪಿ ಮೋರ್ಚಾದ ರಾಜ್ಯಾಧ್ಯಕ್ಷರಾದ ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಕಿಡಿ ಕಾರಿದ್ದಾರೆ.

ಭಾನುವಾರ ನಾಲತವಾಡ ಹೋಬಳಿಯ ವಿವಿಧ ರೈತರ ಹೊಲಗಳಿಗೆ ಬಿಜೆಪಿ ಗಣ್ಯರೊಂದಿಗೆ ವಿಕ್ಷಣೆ ಮಾಡಿ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾನಾಡಿದ ಅವರು, ತೊಗರಿ, ಸಜ್ಜೆ, ಮೆಕ್ಕೆ, ಹತ್ತಿ ಸೇರಿ ಮಳೆಗೆ ಹಾಳಾದ ನಾನಾ ಬೆಳೆಗಳ ಪರೀಶೀಲನೆ ನಡೆಸಿದರು.

ರೈತ ವಿರೋಧಿ ಕಾಂಗ್ರೇಸ್ ಸರ್ಕಾರ ರೈತರ ಬದುಕಿನೊಂದಿಗೆ ಚೆಲ್ಲಾಟವಾಡಿದರೆ ಬಾರಕೋಲಿನಿಂದ ಚಾಟಿ ಬೀಸುವ ಹೋರಾಟ ಮಾಡುವ ಪ್ಲಾನ್ ಮಾಡಿದ್ದೇವೆ. ತಾಲ್ಲೂಕಿನಲ್ಲಿ 1.24 ಲಕ್ಷ ಹೆಕ್ಟರ್ ಬಿತ್ತನೆಯಾಗಿದೆ. 80ರಷ್ಟು ಬೆಳೆ ಹಾನಿಯಾಗಿದೆ. 2019ರಲ್ಲಿ ನಮ್ಮ ಸರ್ಕಾರದ ಅವಧಿಯಲ್ಲಿ ಪ್ರತಿ ಹೆಕ್ಟರ್ ಖುಷ್ಕಿಗೆ ?16800, ನೀರಾವರಿಗೆ ?23500 ಪರಿಹಾರ ಕೊಟ್ಟಿದ್ದೇವೆ. ತೋಟಗಾರಿಕೆ ಬೆಳೆಗೆ ?28000 ನೀಡಿದ್ದೇವೆ. ಮನೆಗಳಿಗೆ 80 ರಷ್ಟು ಹಾನಿಯಾಗಿದ್ದರೆ 5 ಲಕ್ಷ ನೀಡಿದ್ದೇವೆ ಎಂದರು.

ಹೀಗಾಗಿ ಶೀಘ್ರವೇ ಕಾಂಗ್ರೇಸ್ ಸರ್ಕಾರ ಪ್ರತಿ ಎಕರೆಗೆ 25 ಸಾವಿರ ಕೊಡಬೇಕು ಎಂದರು.

ತರಾಟೆಗೆ: ಮಂತ್ರಿಗಳು, ಶಾಸಕರು ಬರೀ ವೈಮಾನಿಕ ಸಮೀಕ್ಷೆ ನಡೆಸಿದರೆ ರೈತರ ಕಷ್ಟ ಅರಿವಾಗುವುದಿಲ್ಲ. ಜಮೀನುಗಳಿಗೆ ಭೇಟಿ ನೀಡಬೇಕು ಅಂದಾಗ ಮಾತ್ರ ವಾಸ್ತವ ಸ್ಥಿತಿ ಗೊತ್ತಾಗುತ್ತದೆ, ಸ್ಥಳೀಯ ಶಾಸಕ ನಾಡಗೌಡ ಅವರೇ, ಮನೆಯಿಂದ ಹೊರ ಬಂದು ಪ್ರತಿ ಜಮೀನುಗಳಿಗೆ ಭೇಟಿರಿ ನೀಡಿ. ಜನ ನಿಮ್ಮನ್ನು ನಂಬಿ ಆಯ್ಕೆ ಮಾಡಿದ್ದಾರೆ ಎಂದು ಕಿಡಿ ಕಾರಿದರು.

ಸತ್ತವರಿಗೆ ಬಾರದ ಪರಿಹಾರ: ನಾಗಬೇನಾಳ ಗ್ರಾಮಕ್ಕೆ ಭೇಟಿ ನೀಡಿದ ಅವರು ಕಳೆದ 1 ತಿಂಗಳಿಂದ ನಾಗಬೇನಾಳದ ರೈತರ ಸುಮಾರು 18 ಕುರಿಗಳು ಸತ್ತು ತಿಂಗಳು ಕಳೆದಿವೆ. ಆದರೆ, ಶಾಸಕರು ಗಮನ ಹರಿಸುತ್ತಿಲ್ಲ, ಕಂದಾಯ ಇಲಾಖೆಯವರು ಸತ್ತ ಕುರಿಗಳಿಗೆ ಪರಿಹಾರ ಇಲ್ಲ ಎಂದು ಪತ್ರ ನೀಡಿದ್ದಾರೆ. ಇದೆಂತಾ ಆಡಳಿತ ಎಂದು ಕಿಡಿ ಕಾರಿದ ನಡಹಳ್ಳಿ ಅವರು ಕುಂಚಗನೂರಿನಲ್ಲಿ ಮೊಸಳೆಗೆ ಬಲಿಯಾದ ವ್ಯಕ್ತಿಗೆ 20 ಲಕ್ಷ ಪರಿಹಾರದ ಆದೇಶ ನೀಡಿದ್ದಾರೆ. ಅದು ನನ್ನ ಹೋರಾಟದ ಫಲ ಎಂದರು. ಅವರು ತಾಲ್ಲೂಕಿನಲ್ಲಿ ಜನರ ಕಡಗಣನೆ ಕಂಡು ಬಂದರೆ ನನ್ನ ಹೋರಾಟ ನಿರಂತರ ಎಂದು ಎಚ್ಚರಿಸಿದರು.

ಜನ್ಮದಿನ ಆಚರಿಸಿಕೊಂಡ ಶಾಸಕರ ಪುತ್ರಿ: ಬಿಜೆಪಿ ಧುರಿಣ ಜಿ.ಪಂ ಮಾಜಿ ಅಧ್ಯಕ್ಷರಾದ ಮುನ್ನಾಧಣಿ ನಾಡಗೌಡ ಮಾತನಾಡಿ, ರೈತರು ಬೆಳೆ ಹಾನಿಯಿಂದ ಸಂಕಷ್ಟದಲ್ಲಿದ್ದಾರೆ.

ಶಾಸಕರ ಪುತ್ರಿಯೊಬ್ಬರು ತಮ್ಮ ಹುಟ್ಟು ಹಬ್ಬದ ಸಂಭ್ರಮದಲ್ಲಿರುವುದು ನ್ಯಾಯವೇ ಕನಿಷ್ಠ ಶಾಸಕರ ಬದಲಿಗೆ ಪುತ್ರಿಯಾದರೂ ರೈತರ ಜಮೀನುಗಳಿಗೆ ಭೇಟಿ ನೀಡಿ ರೈತರ ಸಂಕಷ್ಟ ಆಲಿಸಬಹುದಿತ್ತು ಬರೀ ಕಾರ್ಯಕ್ರಮಗಳನ್ನು ನಡೆಸಿ ಸಾಮಾಜೀಕ ಜಾಲ ತಾಣದಲ್ಲಿ ಮಿಂಚುವ ಕೆಲಸ ಕೈಬಿಡಿ ಎಂದು ಕಿಡಿ ಕಾರಿದರು.

ಈ ವೇಳೆ ಜಿ.ಪಂ ಮಾಜಿ ಉಪಾಧ್ಯಕ್ಷರಾದ ಕೆ.ಆರ್.ಬಿರಾದಾರ, ಎಂ.ಎಸ್.ಪಾಟೀಲ, ಮುತ್ತು ಅಂಗಡಿ, ಶಶಿ ಬಂಗಾರಿ,ಗಿರೀಶಗೌಡ ಮುರಾಳ ಪಾಟೀಲ ಮಾತನಾಡಿದರು.

ಜಗದೀಶ ಪಂಪಣ್ಣವರ, ಸಂಜು ಬಾಗೇವಾಡಿ, ಸಂಗಮೇಶ ಗುಂಡಕನಾಳ, ಸಂಗಣ್ಣಗೌಡ ಕುಳಗೇರಿ, ಬಾಬುಗೌಡ ಪಾಟೀಲ,ಈರಣ್ಣಮುದ್ನೂರ,ರಾಮನಗೌಡ ಹಂಪನಗೌಡ್ರ, ಚಂದ್ರು ಹಂಪನಗೌಡ್ರ, ವೀರೇಶ ಚಲವಾದಿ,ಸಂಗಮೇಶ ಮೇಟಿ, ಚಂದ್ರು ಗಂಗನಗೌಡ್ರ, ಮುದಕಣ್ಣ ಗಂಗನಗೌಡ್ರ ಇದ್ದರು.

## ಮುಧೋಳ ತಾಲೂಕ ಪ್ರಥಮ ಕನ್ನಡ ಜಾನಪದ ಮಹಿಳಾ ಸಮ್ಮೇಳನ

# ಕಲೆಗಳ ತವರೂರು ಜಾನಪದ ಬೀಡು ಲೋಕಾಪುರ: ಅರುಣ ಕಾರಜೋಳ

**ದಿ। ಕೃಷ್ಣಾಜೀ ದೇಶಪಾಂಡೆ ಪ್ರಧಾನ ವೇದಿಕೆ ಲೋಕಾಪುರ :** ಭಾರತೀಯ ನೆಲದ ಜಾನಪದ ಸಂಸ್ಕೃತಿ ಶ್ರೇಷ್ಠವಾದದ್ದು. ಜಾನಪದ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಕಲಾವಿದರ ಕೊಡುಗೆ ಅಪಾರವಾಗಿದೆ. ಕಲೆಗಳ ತವರೂರು ಜಾನಪದ ಬೀಡು ಲೋಕಾಪುರ ಪಟ್ಟಣ ವಿಶೇಷವಾಗಿದೆ ಎಂದು ಬಿಜೆಪಿ ಮುಖಂಡ ಅರುಣ ಕಾರಜೋಳ ಹೇಳಿದರು.



ಪಟ್ಟಣದ ಎಪಿಎಂಸಿ ಆವರಣದಲ್ಲಿ ಮುಧೋಳ ತಾಲೂಕಾ ಪ್ರಥಮ ಕನ್ನಡ ಜಾನಪದ ಮಹಿಳಾ ಸಮ್ಮೇಳನ-2025 ಕಾರ್ಯಕ್ರಮದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಗ್ರಾಮೀಣ ಭಾಗದ ಜಾನಪದ ಹಾಡುಗಳಾದ ಗರತಿ ಪದ, ಸೋಬಾನ ಪದ, ಬೀಸುವ ಪದ, ಹಂತಿ ಪದ, ಹೋಳಿ ಪದ, ರಿವಾಯತ ಪದ, ಒಗಟು... ಹೀಗೆ ಕುಟ್ಟುವಾಗ, ಬೀಸುವಾಗ, ಕೃಷಿ ಚಟುವಟಿಕೆ, ಜಾತ್ರೆ, ಉತ್ಸವದಂಥ ಹತ್ತು ಹಲವಾರು ಸಂದರ್ಭಗಳಲ್ಲಿ ಹಾಡುತ್ತಿದ್ದ ಹಾಡುಗಳು ಜನರ ಮನದಲ್ಲಿ ಅಚ್ಚಳಿಯದೇ ಇನ್ನು ಹಚ್ಚ ಹಸಿರಾಗಿವೆ. ಎಲ್ಲ ಸಾಹಿತ್ಯಕ್ಕೂ ಜಾನಪದ ಸಾಹಿತ್ಯವೇ ತಾಯಿ ಬೇರಾಗಿದೆ ಎಂದು ಹೇಳಿದರು.

ಗಣಿ ಉದ್ಯಮಿ ಹಾಗೂ ಕಲಾ ಪ್ರೇಮಿ ಎಂ. ಎಂ. ವಿರಕ್ತಮಠ ಮಾತನಾಡಿ ಗ್ರಾಮೀಣ ಪ್ರದೇಶ ಸಂಸ್ಕೃತಿ ಬಿಂಬಿಸುವ ಜನಪದ ಕಲೆಯನ್ನು ಉಳಿಸಿ ಬೆಳಸುವಲ್ಲಿ ಕಲಾವಿದರ ಪಾತ್ರ ಬಹಳ ಮುಖ್ಯವಾಗಿದೆ. ಪ್ರತಿಯೊಬ್ಬರು ಸಾಹಿತ್ಯ, ಕಲೆ ಸಾಂಸ್ಕೃತಿಕ ಕಲೆಗಳನ್ನು ಪ್ರೋತ್ಸಾಹಿಸಬೇಕು ಎಂದರು.

ಕರ್ನಾಟಕ ಸಹಕಾರ ಕುರಿ ಮಹಾಮಂಡಳದ ಉಪಾಧ್ಯಕ್ಷ ಕಾಶಿನಾಥ ಹುಡೇದ ಮಾತನಾಡಿ ಸಮ್ಮೇಳನಾಧ್ಯಕ್ಷರಾದ ನಾಡೋಜ ಪುಸ್ಕೃತರು, ಹಿರಿಯ ಕಲಾವಿರಾದ ಶ್ರೀಮತಿ ಯಲ್ಲವ್ವ ರೊಡ್ಡಪ್ಪನವರ ಅವರು ಪಾರಿಜಾತ ಕಲೆ ಪ್ರದರ್ಶನ ನೀಡಿ ಅನೇಕ ಕಲಾವಿರನ್ನು ಪ್ರೋತ್ಸಾಹಿಸಿ ಕಲೆಯನ್ನು ಉಳಿಸಿ ಬೆಳೆಸಿದ್ದಾರೆ.

ಜಿಲ್ಲೆಯಲ್ಲಿಯೇ ಪ್ರಥಮ ಕನ್ನಡ ಜಾನಪದ ಮಹಿಳಾ ಸಮ್ಮೇಳನ ಮಾದರಿಯಾಗಿ ಯಶಸ್ವಿಯಾಗಲು ಶ್ರಮ ವಹಿಸಿ ಎಲ್ಲ ಪದಾಧಿಕಾರಿಗಳ ಕಾರ್ಯ ಶ್ಲಾಘನೀಯ ಎಂದರು.

ಕನ್ನಡ ಜಾನಪದ ಪರಿಷತ್ತು ಜಿಲ್ಲಾಧ್ಯಕ್ಷ ಡಿ.ಎಂ.ಸಾಹುಕಾರ ಮಾತನಾಡಿ ಮುಧೋಳ ತಾಲೂಕಿನ ಭಾವೈಕ್ಯತೆಗೆ ಹೆಸರಾಗಿರುವ ಲೋಕಾಪುರ ಪಟ್ಟಣದಲ್ಲಿ ಜಾತ್ಯಾತೀತ, ಧರ್ಮಾತೀತವಾಗಿ ನಾಡೋಜ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಹಿರಿಯ ಕಲಾವಿದೆ ಶ್ರೀಮತಿ ಯಲ್ಲವ್ವ ರೊಡ್ಡಪ್ಪನವರ ಸರ್ವಾಧ್ಯಕ್ಷತೆಯಲ್ಲಿ ಜರುಗಿದ ಮುಧೋಳ ತಾಲೂಕು ಪ್ರಥಮ ಕನ್ನಡ ಜಾನಪದ ಮಹಿಳಾ ಸಮ್ಮೇಳನದ ಯಶಸ್ವಿಗೆ ಕಾರಣರಾದ ಲೋಕಾಪೂರ ಪಟ್ಟಣದ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಗುರು ಹಿರಿಯರು ತನು ಮನ ಧನದಿಂದ ಸಹಾಯ ಸಹಕಾರ ನೀಡುವ ಮೂಲಕ ಜಾನಪದ ತೇರನ್ನು ಎಳೆಯಲು ಅನವು ಮಾಡಿ ಕೊಟ್ಟ ಸಮಸ್ತ ಜನರಿಗೆ, ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ, ದಾನಿಗಳಿಗೆ, ಮೆರವಣಿಗೆಯಲ್ಲಿ ಪಾಲ್ಗೊಂಡ ಎಲ್ಲ ಕಲಾ ತಂಡದ ಕಲಾವಿದರಿಗೆ, ಆರತಿ ಕುಂಭ ಹೊತ್ತ ತಾಯಂದಿರಿಗೆ, ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಸ್ವಸಹಾಯ ಸಂಘಗಳ ಪದಾಧಿಕಾರಿಗಳು, ಸಮ್ಮೇಳನದ ಮಾಹಿತಿಯನ್ನು ಹೊರ ಜಗತ್ತಿಗೆ ಬಿತ್ತರಿಸಲು ಬಂದಿರುವ ನನ್ನೆಲ್ಲ ಮಾಧ್ಯಮ ಮಿತ್ರರು ಹಾಗೂ ಕನ್ನಡ ಜಾನಪದ ಪರಿಷತ್ತಿನ ರಾಜ್ಯ, ಜಿಲ್ಲೆ, ತಾಲೂಕು, ವಲಯ ಮಟ್ಟದ ಪದಾಧಿಕಾರಿಗಳು ಸೇರಿದಂತೆ ಸಮ್ಮೇಳನದ ಯಶಸ್ವಿಗೆ ಟೊಂಕಕಟ್ಟಿ ನಿಂತಿರುವ ಅದರಲ್ಲಿ ಮುಖ್ಯವಾಗಿ ಲೋಕಾಪುರ ವಲಯ ಘಟಕದ ಅಧ್ಯಕ್ಷೆ ರೇಖಾ ನರಹಟ್ಟಿ ಅವರ ಮಹಿಳಾ ತಂಡ ಹಗಲಿರುಳು ಎನ್ನದೇ ಶ್ರಮಿಸಿದ್ದಾರೆ. ಜೊತೆಗೆ ಲೋಕಾಪುರದ ಗುರುಹಿರಿಯರು, ಮಾತೆಯರು, ವಿವಿಧ ಸಂಘಟನೆಯ ಪದಾಧಿಕಾರಿಗಳು ಸೇರಿದಂತೆ ಎಲ್ಲ ಮಹನೀಯರಿಗೂ ಕನ್ನಡ ಜಾನಪದ ಪರಿಷತ್ತಿನ ಪರವಾಗಿ ಧನ್ಯವಾದಗಳು ತಿಳಿಸಿದರು.

ವೇದಿಕೆಯಲ್ಲಿ ಕರ್ನಾಟಕ ಸಹಕಾರ ಕುರಿ ಮಹಾಮಂಡಳದ ಉಪಾಧ್ಯಕ್ಷ ಕಾಶಿನಾಥ ಹುಡೇದ, ಬಿಜೆಪಿ ಗ್ರಾಮೀಣ ಘಟಕ ಅಧ್ಯಕ್ಷ ಸಂಗನಗೌಡ ಕಾತರಕಿ, ಜಿಪಂ ಮಾಜಿ ಸದಸ್ಯ ಬೀಮಶೆಪ್ಪ ಹಲಕಿ, ಸಿದ್ರಾಮಪ್ಪ ದೇಸಾಯಿ, ಎಂ.ಜಿ. ದಾಸರ, ಗುಣಾಕರ ಶೆಟ್ಟಿ, ಕಜಾಪ ಜಿಲ್ಲಾಧ್ಯಕ್ಷ ಡಿ.ಎಂ. ಸಾಹುಕಾರ, ಸಮ್ಮೇಳನಾಧ್ಯಕ್ಷೆ ನಾಡೋಜ ಶ್ರೀಮತಿ ಯಲ್ಲವ್ವ ರೊಡ್ಡಪ್ಪನವರ, ಕಜಾಪ ತಾಲೂಕಾಧ್ಯಕ್ಷೆ ಲಕ್ಷ್ಮೀ ಹಾರೂಗೊಪ್ಪ, ಲೋಕಾಪುರ ವಲಯ ಮಹಿಳಾ ಘಟಕದ ಅಧ್ಯಕ್ಷೆ ರೇಖಾ ನರಹಟ್ಟಿ, ಕನ್ನಡ ಜಾನಪದ ಪರಿಷತ್ ವಲಯ ಮಹಿಳಾ ಘಟಕದ ಸರ್ವ ಸದಸ್ಯರು, ಮಹಿಳೆಯರು, ವಿವಿಧ ಕಲಾವಿದರು, ಕನ್ನಡ ಪ್ರೇಮಿಗಳು, ಸಾಹಿತಿಗಳು ಇದ್ದರು.

# ಹ್ಯಾಂಡ್‌ಬಾಲ್ ಸ್ಪರ್ಧೆ: ಎಸ್.ಆರ್.ಎನ್ ಮೆಹತಾ ಶಾಲಾ ಮಕ್ಕಳು ರಾಜ್ಯಮಟ್ಟಕ್ಕೆ ಆಯ್ಕೆ




**ಕಲಬುರಗಿ:** ಸಾರ್ವಜನಿಕಶಿಕ್ಷಣಇಲಾಖೆಯವತಿಯಿಂದ ಕಲಬುರಗಿ ಜಿಲ್ಲೆಯಲ್ಲಿ ಆಯೋಜಿಸಿದ ವಿಭಾಗ ಮಟ್ಟದ ಹ್ಯಾಂಡ್ ಬಾಲ್ ಕ್ರೀಡಾ ಕೂಟದಲ್ಲಿ ನಗರದ ಎಸ್. ಆರ್. ಎನ್. ಮೆಹತಾ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

17 ವರ್ಷದ ಒಳಗಿನ ಬಾಲಕಿಯರ ಹ್ಯಾಂಡ್ ಬಾಲ್ ಸ್ಪರ್ಧೆಯಲ್ಲಿ ಸೋನಾಕ್ಷಿ,ಪ್ರತೀಕ್ಷಾ,ಶ್ರದ್ಧಾ

14 ವರ್ಷದ ಒಳಗಿನ ಬಾಲಕಿಯರ ಹ್ಯಾಂಡ್ ಬಾಲ್ ಸ್ಪರ್ಧೆಯಲ್ಲಿ ಪ್ರತುಷಾ ಜಿ,ಅನಘಾ ಜೆ,ಆರೋಹಿ ಕೆ

14 ವರ್ಷದ ಒಳಗಿನ ಬಾಲಕರ ಹ್ಯಾಂಡ್ ಬಾಲ್ ಸ್ಪರ್ಧೆಯಲ್ಲಿ ವಿನಿತ ಕೆ,ವಿಭೂವನ ಎನ್,

17 ವರ್ಷದ ಒಳಗಿನ ಸ್ಪರ್ಧೆಯಲ್ಲಿ ಓಂಕಾರ ಹೆಚ್,ಅಭಿಷೇಕ ಯು ಅವರುವಿಭಾಗ ಮಟ್ಟದ ಸ್ಪರ್ಧೆಯಲ್ಲಿ ಬಾಲಕಿಯರು ಪ್ರಥಮ ಸ್ಥಾನ ಮತ್ತು ಬಾಲಕರು ದ್ವಿತಿಯ ಸ್ಥಾನವನ್ನು ಪಡೆಯುವುದರ ಮೂಲಕ ತೂಮಕೂರನಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಕ್ರೀಡಾ ಕೂಟಕ್ಕೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಆಡಳಿತ ಮಂಡಳಿಯ ಟ್ರಸ್ಟಿಗಳಾದ ಚಕೋರ ಮೆಹತಾ, ಪ್ರಾಚಾರ್ಯರಾದ ಪ್ರೀತಿ ಮೆಹತಾ, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಬಸವರಾಜ ತಳಕೇರಿ, ಹ್ಯಾಂಡ್‌ಬಾಲ ತರಬೇತುದಾರ ಮಯೂರ ಉಖಂಡೆ ಹಾಗೂ ಶಿಕ್ಷಕ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

# ಸಾಮಾಜಿಕ:ಶೈಕ್ಷಣಿಕ ಸಮೀಕ್ಷೆಗಾಗಿ ಶಾಲೆಗಳಿಗೆ ರಜೆ ವಿಸ್ತರಣೆ:ಎಐಡಿಎಸ್‌ಓ ಆಕ್ಷೇಪ

**ಕಲಬುರಗಿ:** ರಾಜ್ಯ ಸರ್ಕಾರವು ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಗಾಗಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ರಜೆಯನ್ನು ವಿಸ್ತರಿಸಿರುವುದಕ್ಕೆ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ವ್ಯಕ್ತಪಡಿಸಿದೆ.




ಸರ್ಕಾರದ ಈ ಕ್ರಮವು ಅತ್ಯಂತ ಅಪ್ರಜಾತಾಂತ್ರಿಕವಾಗಿದ್ದು, ಇದರಿಂದ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಅಡ್ಡಿ ಎದುರಾಗುವುದರಲ್ಲಿ ಸಂಶಯವಿಲ್ಲ. ಇದರಿಂದಾಗಿ ಖಾಸಗಿ ಶಾಲಾ ಮತ್ತು ಸರ್ಕಾರಿ ಶಾಲಾ ಮಕ್ಕಳನಡುವೆಭೀಕರತಾರತಮ್ಯಉಂಟಾಗುವಆತಂಕ ಎದುರಾಗಿದೆ.ಈಗಾಗಲೇ ಶಾಲಾ ಶಿಕ್ಷಕರು ಭೋದನೆ ಮಾಡುವ ಜೊತೆಗೆ ಭೋದಕೇತರ ಚಟುವಟಿಕೆಗಳ ಜವಾಬ್ದಾರಿಗಳನ್ನು ನಿರ್ವಹಿಸುವ ದುಸ್ಥಿತಿ ಇದ್ದು, ಈ ಸಮೀಕ್ಷೆಯ ಜವಾಬ್ದಾರಿಯು ಹೊರೆಯಾಗಲಿದೆ ಎಂದು ಶಿಕ್ಷಕರಿಂದಲೂ ಕೇಳಿಬರುತ್ತಿದೆ. ರಜೆ ವಿಸ್ತರಣೆ ಆದರೇ ಕಡಿಮೆ ಸಮಯದಲ್ಲಿ ಪಾಠಗಳನ್ನು ಸಂಪೂರ್ಣಗೊಳಿಸುವ ಒತ್ತಡಕ್ಕೆ ಶಿಕ್ಷಕರು ಸಿಲುಕಲಿದ್ದಾರೆ. ಅಲ್ಲದೇ ಈ ಕ್ರಮವು ಸರ್ಕಾರಿ ಶಾಲಾ ಮಕ್ಕಳ ಶೈಕ್ಷಣಿಕ ಸ್ಥಿರತೆಯನ್ನು ಹಾಳು ಮಾಡುತ್ತದೆ. ಬೋಧನೆ ಮತ್ತು ಕಲಿಕೆಯ ಶಾಲಾ ಪ್ರಮುಖ ಕಾರ್ಯಕ್ಕೆ ತೊಂದರೆಯಾಗದಂತೆ ಪೂರಕ ಯೋಜನೆಯಿಲ್ಲದೆ, ಚರ್ಚೆಯು ಮಾಡದೇ ಶಾಲೆಗಳಿಗೆ ಏಕಾಏಕಿ ರಜೆಯನ್ನು ವಿಸ್ತರಿಸಿರುವುದು ಶೋಚನೀಯ ಸಂಗತಿಯಾಗಿದೆ. ಜೊತೆಗೆ ಸರ್ಕಾರಿ ಶಾಲಾ ಮಕ್ಕಳ ಫಲಿತಾಂಶ ಕುಸಿಯುವ ಭೀತಿ ಉಂಟಾಗಿದೆ.

ಸಮೀಕ್ಷೆಯ ಕೆಲಸಕ್ಕೆ ಸರ್ಕಾರಿ ಶಾಲಾ ಸಮಯವನ್ನು ಬಲಿಕೊಡದೆ, ಮಕ್ಕಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ರಜೆ ವಿಸ್ತರಣೆಯ ಆದೇಶವನ್ನು ಹಿಂಪಡೆದು, ಸಮೀಕ್ಷೆಯ ಕೆಲಸಕ್ಕೆ ಪರ್ಯಾಯ ವ್ಯವಸ್ಥೆಗೆ ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ತುಳಜರಾಮ ಎನ್.ಕೆ.ಆಗ್ರಹಿಸಿದ್ದಾರೆ.

# ಕರ್ನಾಟಕ ರೈತ ಕಾರ್ಮಿಕ ಯುವ ಒಕ್ಕೂಟದ ಶಾಖೆ ಉದ್ಘಾಟನೆ ಹಾಗೂ ಪದಾಧಿಕಾರಿಗಳ ಪದಗ್ರಹಣ

**ಇಲಕಲ್ :** ಅ. 6 ಕರ್ನಾಟಕ ರೈತ ಕಾರ್ಮಿಕ ಯುವ ಒಕ್ಕೂಟ(ರಿ) ಕರ್ನಾಟಕ ರಾಜ್ಯ ಅಧ್ಯಕ್ಷರಾದ ಶಶಿಧರ್ ಎಚ್ ಅವರ ಉಪಸ್ಥಿತಿಯಲ್ಲಿ ಹಾಗೂ ರಾಜ್ಯ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ಇಲಕಲ್ ತಾಲೂಕ ಶಾಖೆ ಉದ್ಘಾಟನಾ ಸಮಾರಂಭ ಹಾಗೂ ಪದಾಧಿಕಾರಿಗಳ ಪದಗ್ರಹಣ ನಡೆಯಿತು.



ಇಲಕಲ್ ತಾಲೂಕ ಶಾಖೆ ಅಧ್ಯಕ್ಷರಾಗಿ ಮೋಹನ್ ಕಂದಗಲ್ಲ,ಇಲಕಲ್ ತಾಲೂಕ ಶಾಖೆ ಉಪಾಧ್ಯಕ್ಷರಾಗಿ ಚಂದ್ರಶೇಖರ ಸನ್ನಿ ಆಯ್ಕೆ ನಡೆಯಿತು.

ಇಲಕಲ್ ತಾಲೂಕ ಶಾಖೆ ಪದಾಧಿಕಾರಿಗಳಾಗಿ ಮುರ್ತುಜಾ ಖಾದರಿ ಕಂದಗಲ್ಲ, ಆಸಿಫ್ ಮೌಲ್ವಿ, ಶಾಹಿದ್ ಸರ್ಕಾವಾಸ್, ಹುಸೇನ್ ಭಾಷಾ ಚೋಪ್ದಾರ್, ಶಾನವಾಜ್ ಕಂದಗಲ್ಲ, ಸೇರಿದಂತೆ ತಾಲೂಕ್ ಪದಾಧಿಕಾರಿಗಳ ಆಯ್ಕೆ ನಡೆಯಿತು.

ಕರ್ನಾಟಕ ರೈತ ಕಾರ್ಮಿಕ ಯುವ ಒಕ್ಕೂಟ(ರಿ) ಕರ್ನಾಟಕ ರಾಜ್ಯ ಅಧ್ಯಕ್ಷರಾದ ಶಶಿಧರ್ ಎಚ್ ಅವರು ಮಾತನಾಡಿ ದೇಶದ ಸ್ವಾತಂತ್ರ್ಯದ ನಂತರ ಎಲ್ಲ ಸಮಸ್ಯೆಗಳ ಕುರಿತು ಚರ್ಚೆಯಾಗಿದೆ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಕೆಲಸ ಆಗ್ತಾ ಇದೆ ಆದರೆ ರೈತರ ಕಾರ್ಮಿಕರ ಯುವಕರ ಸಮಸ್ಯೆಗಳಿಗೆ ಪರಿಹಾರ ಸಿಗ್ತಾ ಇಲ್ಲ ಎಲ್ಲ ಸಮಸ್ಯೆಗಳನ್ನ ಪರಿಹರಿಸಲಿಕ್ಕಾಗಿಯೇ ಕರ್ನಾಟಕ ರೈತ ಕಾರ್ಮಿಕ ಯುವ ಒಕ್ಕೂಟ(ರಿ) ಸಂಘಟನೆ ಇದೆ ಇವತ್ತಿನ ಪದಾಧಿಕಾರಿಗಳಾದ ತಾಲೂಕ ಅಧ್ಯಕ್ಷರು ಉಪಾಧ್ಯಕ್ಷರು ಮತ್ತೆ ಎಲ್ಲ ಪದಾಧಿಕಾರಿಗಳಿಗೆ ಸಂಘಟನೆಗೆ ಸ್ವಾಗತ ಕೋರಿ ಶೀಘ್ರದಲ್ಲಿಯೇ ಕಾನೂನಾತ್ಮಕ ಸಲಹೆಗಳ ತರಬೇತಿ ಶಿಬಿರ ನಡೆಸಿ ತಮ್ಮೆಲ್ಲರಿಗೂ ತರಬೇತಿ ನೀಡಲಾಗುವುದು ಎಂದು ಹೇಳಿದರು.

ಇಲಕಲ್ ತಾಲೂಕ ಶಾಖೆ ನೂತನ ಅಧ್ಯಕ್ಷರಾದ ಮೋಹಿನ್ ಕಂದಗಲ್ಲ ಅವರು ಮಾತನಾಡಿ ನಗರದಲ್ಲಿ ನೈಕಾರಿಕೆ ನೆಲಕಚ್ಚಿದೆ, ಗ್ರಾನೈಟ್ ಉದ್ಯಮ ಕೂಡ ನೆಲಕಚ್ಚಿದೆ ಸರ್ಕಾರ ಯಾವುದೇ ರೀತಿಯ ಕೈಗಾರಿಕಾ ಉದ್ಯಮಗಳನ್ನು ಇಲ್ಲಿ ಸ್ಥಾಪನೆ ಮಾಡಿಲ್ಲ ಹೀಗಾಗಿ ಯುವಕರ ಕೈಯಲ್ಲಿ ಕೆಲಸವಿಲ್ಲದೆ ಜನರು ಮಹಾರಾಷ್ಟ್ರ ಗೋವಾ ಬೆಂಗಳೂರು ಅಂತ ಮಹಾನಗರಗಳಿಗೆ ಗುಳೆ ಹೊರಟಿದ್ದಾರೆ. ಹೀಗಾಗಿ ಸಾಕಷ್ಟು ಸಮಸ್ಯೆಗಳು ಇದ್ದು ಆ ಎಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ಈ ಸಂಘಟನೆ ಕೆಲಸ ಮಾಡುತ್ತೆ ಹೋರಾಟ ಮಾಡುತ್ತೆ ಎಂದು ಹೇಳಿದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State